ಐಕ್ಯರಂಗ

ಭಾರತ ಕಮ್ಯುನಿಸ್ಟ್ ಪಕ್ಷ [ಮಾರ್ಕ್ಸ್‌ವಾದಿ] ಕರ್ನಾಟಕ ರಾಜ್ಯ ಸಮಿತಿಯ ಮುಖಪತ್ರಿಕೆ

ಸಂಪುಟ 4 ಸಂಚಿಕೆ 20 ಮೇ 16, 1982 ಬೆಲೆ 60 ಪೈಸೆ

ಎಡ ಪ್ರಜಾಪ್ರಭುತ್ವ ರಂಗದ ಅಭ್ಯರ್ಥಿಗಳನ್ನು ಗೆಲ್ಲಿಸಿರಿ

ಮೇ 19 ರಂದು ಕೇರಳದ ವಿಧಾನ ಸಭೆಗೆ ಚುನಾವಣೆ ನಡೆಯಲಿದೆ. ಮಾರ್ಕ್ಸ್‌ವಾದಿ ಕಮ್ಯೂನಿಸ್ಟ್ ಪಕ್ಷದ ನೇತೃತ್ವದ ಎಡ ಪ್ರಜಾಪ್ರಭುತ್ವರಂಗವನ್ನು ಸೋಲಿಸುವುದಕ್ಕಾಗಿ ಇಂದಿರಾ ಕಾಂಗ್ರೆಸ್ ಮತ್ತು ಅದರ ಕೂಟ ಎಲ್ಲಾ ಪ್ರಯತ್ನಗಳನ್ನು ಮಾಡುತ್ತಿವೆ. ದುಡಿಯುವ ವರ್ಗ ಮತ್ತು ಜನಸಾಮಾನ್ಯರ ಪರವಾಗಿ ಅಧಿಕಾರ ನಡೆಸುತ್ತಿದ್ದ ಎಡ ಪ್ರಜಾಪ್ರಭುತ್ವರಂಗ ಸರ್ಕಾರವನ್ನು, ಕಾನೂನುವ್ಯವಸ್ಥೆಯುನ್ನು ಹದಗೆಡಿಸಲು ಪ್ರಯತ್ನಿಸುವುದರ ಮೂಲಕವೂ, ಪಕ್ಷಾಂತರದ ಮೂಲಕವೂ ಅಧಿಕಾರ ಕಳೆದುಕೊಳ್ಳುವಂತೆ ಮಾಡಿದ ಕಾಂಗ್ರೆಯು ಅಬ್ಬರದ ಪ್ರಚಾರ ನಡೆಸುತ್ತಿದೆ. ಸಂದರ್ಭ ಸಾಧಕರುಗಳಿಂದಲೂ, ಅಧಿಕಾರಲಾಲಸೆಯಿಂದಲೂ, ಅತ್ಯಂತ ಪ್ರತಿಗಾಮಿ ಶಕ್ತಿಗಳಿಂದಲೂ ತುಂಬಿರುವ ತನ್ನ ಹನ್ನೊಂದು ಪಕ್ಷಗಳ ಕೂಟವು ಸುಭದ್ರ ಸರ್ಕಾರವನ್ನು ಕೊಡುವ ಭರವಸೆಯನ್ನು ಕಾಂಗ್ರೆಯು ಕೊಡುತ್ತಿದೆ ! ತನ್ನ ಪಕ್ಷಕ್ಕೆ ಭಾರಿ ಬಹುಮತವಿರುವ ರಾಜ್ಯಗಳಲ್ಲಿ ಇಂದಿರಾ ಕಾಂಗ್ರೆಸ್ ಅದೆಷ್ಟು ಸುಭದ್ರ ಸರ್ಕಾರವನ್ನು ಕೊಟ್ಟಿದೆ ಎಂಬುದು ಜನವಿದಿತ.

ಕಾಂ। ನಾಯನಾರ್ ನೇತೃತ್ವದ ಎಡ ಪ್ರಜಾಪ್ರಭುತ್ವರಂಗ ಸರ್ಕಾರವು ಜನತೆಯ ಹಕ್ಕುಗಳ ರಕ್ಷಣೆಗಾಗಿಯೂ, ದುಡಿಯುವ ಜನತೆ ಮತ್ತು ಜನಸಾಮಾನ್ಯರ ಸಮಸ್ಯೆಗಳ ಪರಿಹಾರಕ್ಕಾಗಿಯು ಏನೇನು ಮಾಡಿದೆ ಮತ್ತು ಕಾಂಗ್ರೆಸ್ (ಐ) ಕೂಟದ ಕರುಣಾಕರನ್ ನೇತೃತ್ವದ ಸರ್ಕಾರವು ಏನೇನು ಮಾಡಿದೆ ಎನ್ನುವುದು ಕೇರಳದ ಜನತೆಗೆ ತಿಳಿದಿದೆ. ಅಲ್ಪ ಸಂಖ್ಯಾತರ ರಕ್ಷಣೆಗಾಗಿ ಮುತುವರ್ಜಿ ವಹಿಸುವ ಎಡ ಪ್ರಜಾಪ್ರಭುತ್ವರಂಗವು, ಈ ತನಕ ಕಡೆಗಣಿಸಲ್ಪಟ್ಟಿದ್ದ, ಕನ್ನಡ ಜನತೆಯಿರುವ ಕಾಸರಗೋಡು ತಾಲ್ಲೂಕು ಮತ್ತಿತರ ಪ್ರದೇಶಗಳ ಅಭಿವೃದ್ಧಿಗೆ ವಿಶೇಷ ಕ್ರಮ ವಹಿಸಿದೆ. ಇದನ್ನು ಈ ಪ್ರದೇಶದ ಜನತೆ, ಅದರಲ್ಲೂ ಕೇರಳದ ಗಡಿನಾಡಿನಲ್ಲಿರುವ ಕನ್ನಡಿಗರು ಮರೆಯುವಂತಿಲ್ಲ. ಆದುದರಿಂದಲೇ ಎಡ ಪ್ರಜಾಪ್ರಭುತ್ವರಂಗದ ಅಭ್ಯರ್ಥಿಗಳನ್ನು ಗೆಲ್ಲಿಸುವುದು ಕೇರಳದ ಗಡಿನಾಡಿನಲ್ಲಿರುವ ಕನ್ನಡಿಗರ ಕರ್ತವ್ಯವಾಗಿದೆ.

ಪ್ರಜಾಪ್ರಭುತ್ವದ ರಕ್ಷಣೆಗಾಗಿಯೂ ಕೇರಳದ ಜನತೆಯ ಸಮಸ್ಯೆಗಳ ಪರಿಹಾರಕ್ಕಾಗಿಯೂ, ಕೇರಳದಲ್ಲಿ ಕನ್ನಡಿಗರೂ ಸೇರಿದಂತೆ ಎಲ್ಲ ಅಲ್ಪ ಸಂಖ್ಯಾತರ ಹಿತಾಸಕ್ತಿಗಳ ರಕ್ಷಣೆಗಾಗಿಯೂ, ದೇಶದಲ್ಲಿ ಎಡ ಪ್ರಜಾಪ್ರಭುತ್ವ ಬದಲಿಯನ್ನು ಬೆಳೆಸುವುದಕ್ಕೆ ಸಹಾಯಕವಾಗಲೂ ಮೇ 19ರ ಚುನಾವಣೆಯಲ್ಲಿ ಎಡ ಪ್ರಜಾಪ್ರಭುತ್ವರಂಗದ ಅಭ್ಯರ್ಥಿ

(8ನೇ ಪುಟ ನೋಡಿ)

ಕನ್ನಡ ಆಡಳಿತ ಭಾಷೆಯನ್ನಾಗಿ ಮಾಡಲು ಸಿ.ಪಿ.ಐ.(ಎಂ) ಸೆಕ್ರೆಟಾರಿಯೆಟ್ ಕರೆ

ರಾಜ್ಯದ ರಾಜಕೀಯ ಪರಿಸ್ಥಿತಿಯ ಬಗ್ಗೆ ವಿಮರ್ಶೆ ಮಾಡುವುದಕ್ಕಾಗಿ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ರಾಜ್ಯ ಸಮಿತಿಯ ಕಾರ್ಯದರ್ಶಿ ಮಂಡಳಿಯು ಮೇ 4 ಮತ್ತು 5ರಂದು ಬೆಂಗಳೂರಿನಲ್ಲಿ ಸಭೆ ಸೇರಿತು. ಈ ಸಭೆಯಲ್ಲಿ ರಾಜ್ಯದ ಒಟ್ಟು ರಾಜಕೀಯ ಪರಿಸ್ಥಿತಿ, ಅದರಲ್ಲೂ ಮುಖ್ಯವಾಗಿ ರಾಜ್ಯದಲ್ಲಿ ಕಾನೂನು ಮತ್ತು ವ್ಯವಸ್ಥೆ, ಗೋಕಾಕ್ ವರದಿಗೆ ಸಂಬಂಧಪಟ್ಟ ಚಳುವಳಿ ಮತ್ತು ಸರಕಾರದ ಇತ್ತೀಚಿಗಿನ ತೀರ್ಮಾನ, ರೈತರ ಚಳುವಳಿ, ರಾಜ್ಯದಲ್ಲಿನ ಉಪ ಚುನಾವಣೆಗಳು, ಸಿ.ಪಿ.ಐ. ಮತ್ತು ಸಿ.ಪಿ.ಐ.(ಎಂ)ಗಳು ಜತೆಯಾಗಿ ನಡೆಸಲು ಯೋಚಿಸಿರುವ ರಾಜ್ಯಮಟ್ಟದ ಜಂಟೀ ಸಮಾವೇಶ ಇವುಗಳ ಬಗ್ಗೆ ವಿಶೇಷ ಗಮನ ಹರಿಸಲಾಯಿತು.

ಗೋಕಾಕ್ ಸಮಿತಿ ವರದಿ ಮತ್ತು ಸರಕಾರದ ತೀರ್ಮಾನ :

ಗೋಕಾಕ್ ಸಮಿತಿ ವರದಿಗೆ ಸಂಬಂಧಪಟ್ಟು ನಡೆದಿರುವ, ಚಳುವಳಿಯಿಂದುಂಟಾದ ಪರಿಸ್ಥಿತಿ ಮತ್ತು ಸರಕಾರದ ಇತ್ತೀಚಿಗಿನ ತೀರ್ಮಾನದ ಬಗ್ಗೆ ಸಿ. ಪಿ. ಐ. (ಎಂ) ಸೆಕ್ರೆಟಾರಿಯೆಟ್ ಪರ್ಯಾಲೋಚಿಸಿತು. ಭಾಷಾವಾರಾಗಿ ರಾಜ್ಯಗಳ ಪುನರ್ವಿಂಗಡನೆಯಾಗಬೇಕೆಂದು ಹೋರಾಡುವುದರ ಮುಂಚೂಣಿಯಲ್ಲಿದ್ದ ಪಕ್ಷವಾಗಿದೆ ಸಿ ಪಿ. ಐ. (ಎಂ). ಪ್ರಾದೇಶಿಕ ಭಾಷೆಯನ್ನು ಬೆಳೆಸಿ, ಶ್ರೀಮಂತವನ್ನಾಗಿಸಿ, ರಾಜ್ಯ ಭಾಷೆಯನ್ನಾಗಿ ತನ್ನ ಅಗ್ರಸ್ಥಾನ ಪಡೆಯುವಂತೆ ಮಾಡಬೇಕೆಂಬುದೇ ಸಿಪಿಐ (ಎಂ) ನ ನಿಲುಮೆಯಾಗಿದೆ. ಹಾಗೆ ಮಾಡಬೇಕಾದರೆ ರಾಜ್ಯದ ಭಾಷೆಯನ್ನು ಅಂದರೆ ನಮ್ಮ ರಾಜ್ಯದಲ್ಲಿ ಕನ್ನಡವನ್ನು, ಆಡಳಿತದ ಎಲ್ಲಾ ಹಂತಗಳಲ್ಲಿ ಸರಕಾರಿ ಭಾಷೆಯನ್ನಾಗಿ ಮಾಡಬೇಕೆಂದೂ, ರಾಜ್ಯದಲ್ಲಿ ವಾಸಿಸುವ ಎಲ್ಲರೂ ಕನ್ನಡವನ್ನು ಕಲಿಯುವಂತಾಗಬೇಕೆಂದೂ ಸಿ. ಪಿ. ಐ. (ಎಂ) ನಂಬಿದೆ. ಭಾಷೆಯನ್ನು ನಿಜವಾಗಿಯೂ

(8ನೇ ಪುಟ ನೋಡಿ)

ಓದುಗರ ಮತ್ತು ಏಜೆನ್ಸಿದಾರರ ಗಮನಕ್ಕೆ

ಮೇ 30 ರಂದು ಐಕ್ಯರಂಗ "ಮೇ ವಿಶೇಷಾಂಕ" ಪ್ರಕಟವಾಗಲಿರುವುದರಿಂದ ಮೇ 23ರ ಸಂಚಿಕೆಯು ಪ್ರಕಟವಾಗುವುದಿಲ್ಲ.

–ಸಂಪಾದಕ

ಸಂಪಾದಕೀಯ

"ನ್ಯಾಯ ದೊರೆಯುವುದರಲ್ಲಿ ನಿಧಾನ"

1981 ಜೂನ್ 30 ಕ್ಕಾಗುವಾಗ ಭಾರತ ದೇಶದ ಹದಿನೆಂಟು ಹೈಕೋರ್ಟುಗಳಲ್ಲಿ ವಿಚಾರಣೆಯಾಗದೆ ಬಾಕಿ ಉಳಿದಿರುವ ವ್ಯಾಜ್ಯಗಳು 7,79,192. ತುರ್ತಾಗಿ ತೀರ್ಮಾನವಾಗಬೇಕೆಂದು ವಿಶೇಷ ಅರ್ಜಿಗಳನ್ನು ಹಾಕಿದ್ದು, ಒಂದು ವರ್ಷ ಮುಗಿದರೂ ವಿಚಾರಣೆಯಾಗದೆ ಸರ್ವೋಚ್ಚ ನ್ಯಾಯಾಲಯ (ಸುಪ್ರೀಮ್ ಕೋರ್ಟು)ದಲ್ಲಿ ಬಾಕಿ ಉಳಿದಿರುವ ವ್ಯಾಜ್ಯಗಳ ಸಂಖ್ಯೆಯು 1981 ಡಿಸೆಂಬರ್ 31ಕ್ಕಾಗುವಾಗ 5,561. ಹಲವಾರು ವರ್ಷಗಳಿಂದ ವಿಚಾರಣೆಯಾಗದೆ ಬಾಕಿ ಉಳಿದಿರುವ ಸಾಮಾನ್ಯ ವ್ಯಾಜ್ಯಗಳು ಸರ್ವೋಚ್ಚ ನ್ಯಾಯಾಲಯದಲ್ಲಿ ಇದರ ಹತ್ತು ಪಟ್ಟನಷ್ಟಿರಬಹುದು.

ಹೈಕೋರ್ಟುಗಳಲ್ಲಿ ಬಾಕಿ ಉಳಿದಿರುವ ವ್ಯಾಜ್ಯಗಳ ಪೈಕಿ ಉತ್ತರ ಪ್ರದೇಶದ ಅಲಹಾಬಾದ್ ಹೈಕೋರ್ಟಿನಲ್ಲಿ ಅತ್ಯಂತ ಹೆಚ್ಚು ಬಾಕಿ ಇದೆ. ಅಲಹಾಬಾದ್ ಹೈಕೋರ್ಟಿನಲ್ಲಿ 1,45,893 ವ್ಯಾಜ್ಯಗಳು ಬಾಕಿ ಇದ್ದರೆ, ಪಶ್ಚಿಮ ಬಂಗಾಳದ ಹೈಕೋರ್ಟಿನಲ್ಲಿ 87,865 ಬಾಕಿ ಇವೆ. 79,464 ವ್ಯಾಜ್ಯಗಳು ಕರ್ನಾಟಕ ಹೈಕೋರ್ಟಿನಲ್ಲಿ ಬಾಕಿ ಇದ್ದು, ಇದಕ್ಕೆ ಮೂರನೆ ಸ್ಥಾನವಿದೆ. ಇಷ್ಟು ದೊಡ್ಡ ಪ್ರಮಾಣದಲ್ಲಿ ವ್ಯಾಜ್ಯಗಳು ಬಾಕಿ ಉಳಿಯುವುದಕ್ಕೆ ಒಂದು ಮುಖ್ಯ ಕಾರಣ ಸಾಕಷ್ಟು ನ್ಯಾಯಾಧೀಶರುಗಳ ಕೊರತೆ. ಇನ್ನೊಂದು ಕಾರಣವು ರಾಜ್ಯ ಸರಕಾರಗಳು ಅನುಸರಿಸುತ್ತಾ ಬಂದಿರುವ "ನಿಧಾನಮಾಡುವ ತಂತ್ರ" ಎಂದು ಅಭಿಪ್ರಾಯ ಮಾಡಲಾಗಿದೆ.

ಈ ಪರಿಸ್ಥಿತಿಯನ್ನು ಹೋಗಲಾಡಿಸುವುದಕ್ಕೆ ಸರ್ವೋಚ್ಚ ನ್ಯಾಯಾಲಯವು ಕೆಲವು ಸಲಹೆಗಳನ್ನು ನೀಡಿದೆ. ಖಾಲಿ ಇರುವ ಸ್ಥಾನಗಳನ್ನು ಭರ್ತಿ ಮಾಡುವುದು, ಕೆಲವು ಜಟಿಲ ಮತ್ತು ಮುಖ್ಯ ವ್ಯಾಜ್ಯಗಳನ್ನು ಬಿಟ್ಟರೆ ಉಳಿದೆಲ್ಲವನ್ನೂ ಒಬ್ಬೊಬ್ಬ ನ್ಯಾಯಾಧೀಶರೇ ಕೇಳಿಕೊಂಡು ತೀರ್ಪುಕೊಡುವುದು, ಹೈಕೋರ್ಟುಗಳಲ್ಲಿ ನಿವೃತ್ತರಾಗುವ ನ್ಯಾಯಾಧೀಶರುಗಳ ಪೈಕಿ ಕನಿಷ್ಠ ಇಬ್ಬರನ್ನಾದರೂ ಬಾಕಿ ಉಳಿದಿರುವ ವ್ಯಾಜ್ಯಗಳನ್ನು ಮುಗಿಸುವುದಕ್ಕಾಗಿ ತಾತ್ಕಾಲಿಕವಾಗಿ ಕೆಲಸಕ್ಕೆ ಹಚ್ಚಿಕೊಳ್ಳುವುದು. ಸಮಯವನ್ನು ಉಳಿಸಲು ತೀರ್ಪನ್ನು ಪೂರ್ತಿ ಓದದೆ, ಮುಖ್ಯಾಂಶಗಳನ್ನು ಓದುವುದು, ಇವೇ ಮೊದಲಾದ ಸಲಹೆಗಳನ್ನು ನೀಡಲಾಗಿದೆ.

ಇಷ್ಟು ದೊಡ್ಡ ಪ್ರಮಾಣದಲ್ಲಿ ಕೇಸುಗಳು ಬಾಕಿ ಉಳಿದಿರುವುದಕ್ಕೂ, ನ್ಯಾಯಾಲಯಗಳಲ್ಲಿ ನ್ಯಾಯ ದೊರೆಯುವುದು ನಿಧಾನವಾಗುತ್ತಿರುವುದಕ್ಕೂ ಸ್ವಾತಂತ್ರ್ಯ ನಂತರ ದೇಶವನ್ನು ಆಳಿಕೊಂಡು ಬಂದಿರುವ ಸರಕಾರಗಳೇ ಕಾರಣ. ಇದರಲ್ಲಿ ಸಿಂಹಪಾಲು ಕಾಂಗ್ರೆಸ್ ಸರಕಾರದ್ದೇ ಆಗಿದೆ. ಸರ್ವೋಚ್ಚ ನ್ಯಾಯಾಲಯ ಮತ್ತು ಉಚ್ಚ ನ್ಯಾಯಾಲಯಗಳಲ್ಲಿ ಪರಿಸ್ಥಿತಿ ಹೀಗಿರುವಾಗ, ಕೆಳದರ್ಜೆಯ ನ್ಯಾಯಾಲಯಗಳಲ್ಲಿ ಪರಿಸ್ಥಿತಿ ಇನ್ನೂ ಕೆಟ್ಟದೆ. "ನ್ಯಾಯ ದೊರೆಯುವುದರಲ್ಲಿ ನಿಧಾನ ಮಾಡುವುದು ಅಂದರೆ ನ್ಯಾಯದೊರೆಯದಿರುವುದು" ಆಗಿದೆ. ನ್ಯಾಯಾಲಯಗಳಲ್ಲಿ ನ್ಯಾಯ ದೊರೆಯುವುದು ನಿಧಾನವಾಗುತ್ತಿರುವುದರಿಂದ ಅತ್ಯಂತ ಹೆಚ್ಚು ಕಷ್ಟಕ್ಕೊಳಗಾಗುವವರು ಶ್ರಮಜೀವಿ ವರ್ಗ ಮತ್ತು ಜನಸಾಮಾನ್ಯರು ಈ ಜನತೆಗೆ ನಿಜವಾಗಿಯೂ ನ್ಯಾಯ ದೊರೆಯುವಂತಾಗಬೇಕಾದರೆ ಕಾನೂನು ಮತ್ತು ವ್ಯಾಜ್ಯಗಳನ್ನು ತೀರ್ಮಾನ ಮಾಡುವ ವಿಧಾನ ಮತ್ತು ವ್ಯವಸ್ಥೆಗಳಲ್ಲೇ ಮೂಲಭೂತವಾದ ಬದಲಾವಣೆಗಳು ಅವಶ್ಯ. ಸಧ್ಯ, ಸರ್ವೋಚ್ಚ ನ್ಯಾಯಾಲಯದ ಸಲಹೆಗಳನ್ನು ಕಾರ್ಯಗತಗೊಳಿಸುವುದರ ಮೂಲಕ ಕನಿಷ್ಟ ಬಾಕಿ ಉಳಿದಿರುವ ವ್ಯಾಜ್ಯಗಳನ್ನು ಮುಗಿಸುವುದಕ್ಕಾದರೂ ಶ್ರಮವಹಿಸಬೇಕು.

ವಿಕ್ರಾಂತ್ ಟೈರ್ಸ್ ಕಂಪನಿಯಲ್ಲಿ ವೇತನ ಒಪ್ಪಂದ

ಮೈಸೂರಿನ ವಿ ಕ್ರಾಂ ತ್ ಟೈರ್ಸ್ ಕಂಪನಿ, ನಮ್ಮ ರಾಜ್ಯದಲ್ಲಿರುವ ಏಕ ಮೇವ ಟೈರ್ ಉತ್ಪಾಧನಾ ಕಂಪನಿ. ಇಲ್ಲಿ ಸುಮಾರು 1500 ಕಾರ್ಮಿಕರು ಕೆಲಸ ಮಾಡುತ್ತಲಿದ್ದಾರೆ.

1981 ಡಿಸೆಂಬರ್‌ನಲ್ಲಿ ಇಲ್ಲಿ ಅಸ್ತಿತ್ವದಲ್ಲಿದ್ದ ಸಂಘದ ಪದಾಧಿಕಾರಿಗಳು, ಕಾರ್ಮಿಕರ ಸಂಬಳ ಕುರಿತು ಆಡಳಿತ ವರ್ಗದೊಟ್ಟಿಗೆ 3ವರ್ಷದ ಒ ಪ್ಪಂ ದ ಮಾಡಿಕೊಂಡು ಇದನ್ನು ಸರ್ವಸದಸ್ಯರ ಸಭೆ ಮುಂದೆ ಇಟ್ಟಿತು. ಈ ಒಪ್ಪಂದದ ಪ್ರಕಾರ ಕಾರ್ಮಿಕರ ವೇತನದ ಹೆಚ್ಚಳವನ್ನು 3 ವಿಭಾಗ ಮಾಡಿ (ಅಂದರೆ 130 ರೂ, 145 ರೂ ಮತ್ತು 160 ರೂ.) ಲಾಗಿತ್ತು. ಈ ಟೈರ್ ಉತ್ಪತ್ತಿಯನ್ನು ಸಹಾ ನಿ ಗ ದಿ ಮಾ ಡ ಲಾಗಿತ್ತು. ಕಾರ್ಮಿಕರು ಈ ಒಪ್ಪಂದವನ್ನು ತಿರಸ್ಕರಿಸಿ ಸಂಘಕ್ಕೆ ಹೊಸ ಪದಾಧಿಕಾರಿಗಳನ್ನು ಆಯ್ಕೆ ಮಾಡಲಾಯಿತು.

ಸಂ ಘ ಕ್ಕೆ ನೂತನ ಪದಾಧಿಕಾರಿಗಳನ್ನು ಆಯ್ಕೆಮಾಡಿ ಕೆಲವು ದಿನಗಳಲ್ಲೇ ಸಂಘದ ಪ್ರಧಾನ ಕಾರ್ಯದರ್ಶಿಯನ್ನು ಕೆ ಲ ಸ ದಿಂ ದ ವಜಾ ಮಾಡಲಾಯಿತು. ಕೊನೆಯಲ್ಲಿ ಸಂಘಕ್ಕೆ ಮಾರ್ಗದರ್ಶನ ನೀಡಲು ಸಲಹಾಗಾರರನ್ನಾಗಿ ಸಿಐಟಿಯು ಕಾರ್ಯಸಮಿತಿ ಅಧ್ಯಕ್ಷ ಕಾಂ॥ ಸೂರ್ಯನಾರಾಯಣ ರಾವ್ ಅ ವ ರ ನ್ನು ಆಯ್ಕೆ ಮಾಡಿಕೊಂಡರು.

ಕಾಂ॥ ಸೂರ್ಯನಾರಾಯಣರಾವ್ ಆಡಳಿತವರ್ಗದೊಟ್ಟಿಗೆ ಮಾ ತು ಕ ತೆ ನಡೆಸಿ ಸಂಘದ ಪ್ರಧಾನ ಕಾರ್ಯದರ್ಶಿಯನ್ನು ಡಿಸ್‌ಮಿಸ್ ಆಜ್ಞೆ ಮಾಡಿದ್ದನ್ನು ಸಸ್ಪೆಂಡ್ ಆಗಿ ಪರಿವರ್ತಿಸುವಂತೆ ಕ್ರಮ ಕೈಗೊಂಡರು.

ಜನವರಿ ತಿಂಗಳಿನಲ್ಲಿ ಆಡಳಿತವರ್ಗಕ್ಕೆ ಹೊಸ ಬೇಡಿಕೆ ಪತ್ರ ಸಲ್ಲಿಸಲಾಯಿತು. ಮಾತುಕತೆ ನಡೆಯುತ್ತಿರುವಾಗ, ವೇತನವನ್ನು ಉತ್ಪತ್ತಿ ಮತ್ತು ನೈಪುಣ್ಯತೆಗೆ ಲಗತ್ತು ಮಾಡಿದರೆ 130ರೂ, 145 ರೂ, 160ರೂ.ಕ್ಕಿಂತ ಹೆಚ್ಚಿಸುವುದಾಗಿ ಆಡಳಿತವರ್ಗ ತಿ ಳಿ ಸಿ ತು. ಆಡಳಿತ ವರ್ಗದ ಈ ಸಲಹೆಗೆ ಕಾರ್ಮಿಕರು ಮತ್ತು ಸಂಘ ಒಪ್ಪಲಿಲ್ಲ. ಹೋರಾಟಕ್ಕೆ ಸಿದ್ಧರಾದರು.ಮುಷ್ಕರದ ಕುರಿತು ಮತದಾನಕ್ಕೆ ಸಿದ್ಧತೆ ನಡೆಯಿತು.

ಕಾರ್ಮಿಕರ ಐಕ್ಯತೆ ನೋಡಿ ಮಾಲೀಕರು ತಮ್ಮ ನಿಲುವು ಬದಲಿಸಿ ಮಾತುಕತೆಗೆ ಮುಂದೆ ಬಂದರು. ಲೇಬರ್ ಕಮೀಷನರ್‌ರ ಎದುರು ಮಾ ತು ಕ ತೆ ನಡೆದು 23-4-82 ರಂದು ವೇತನ ಮತ್ತಿತರ ಸೌಲಭ್ಯಗಳ ಕುರಿತು ಒಪ್ಪಂದಕ್ಕೆ ಬರಲಾಯಿತು. ಒಪ್ಪಂದದ ಅವಧಿ 2 ವರ್ಷ.

ಒಪ್ಪಂದದ ಮುಖ್ಯಾಂಶಗಳು :

ಈ ಒಪ್ಪಂದದ ಪ್ರಕಾರ ಕಾರ್ಮಿಕರಿಗೆ ತಲಾ ಕನಿಷ್ಠ 200 ರೂನಿಂದ ಗರಿಷ್ಠ 300 ರೂ ವರೆಗೂ ಹೆಚ್ಚಿನ ವೇತನ ದೊರೆಯಲಿದೆ. ಮೊದಲಿದ್ದ 3 ವಿಭಾಗದ ಬದಲಾಗಿ ಎಲ್ಲರಿಗೂ ಸಮಾನವಾದ ವೇತನ ಹೆಚ್ಚಳ 1-1-82 ರಿಂದ ದೊರೆಯಲಿದೆ.

ಜೊತೆಗೆ ಷಿಪ್ಟ್ ಅಲವೆನ್ಸ್, ಹಜಾರಡ್ಸ್‌ಅಲವನ್ಸ್,ವಾಷಿಂಗ್ ಅಲವನ್ಸ್ ಸ್ಟ್ಯಾಗರಿಂಗ್ ಷಿಪ್ಟ್ ಅಲವನ್ಸ್‌ಗಳು ದೊ ರೆ ತಿ ವೆ. ಪ್ರತಿಕಾರ್ಮಿಕರಿಗೂ ಬೂಟ್ಸಿಗೆ ಬದಲಾಗಿ ಪ್ರತಿವರ್ಷ 100 ರೂ ಕೊಡಲಾಗುವುದು. ಜನರಲ್ ಷಿಪ್ಟ್ ವೇಳೆಯಲ್ಲಿ ಅರ್ಧಗಂಟೆ ಕೆಲಸದ ಅವಧಿ ಕಡಿಮೆಯಾಗಲಿದೆ.

ಒಪ್ಪಂದ ಜನವರಿ (1982) ಯಿಂದ 2 ವರ್ಷದ ಅ ವ ಧಿ ಯ ವರೆಗಿದ್ದರೂ 1-7-81 ರಿಂದ 31-12-81 ರವರೆಗಿನ ಅವಧಿಗೆ ಮಾಹೆಯಾನ 150 ರೂ. ನಂತೆ ಅರಿಯರ್ಸ್ ಕೊಡಲು ಆಡಳಿತ ವರ್ಗ ಒಪ್ಪಿದೆ. ಸುಮಾರು 1200ರೂ (ತಲಾ) ಯಿಂದ 1500 ರೂ ಅರಿಯರ್ಸ್‌ನ್ನು ಒಪ್ಪಂದವಾದ 2 ತಿಂಗಳ ಅವಧಿಯಲ್ಲಿ ಕೊಡಲು ಒಪ್ಪಂದವಾಗಿದೆ. (ಅಂದರೆ ಕಾರ್ಮಿಕರ ಹಾ ಜ ರಾ ತಿ ಮೇಲೆ.)

ಈ ಒಪ್ಪಂದದ ಜಾ ರಿ ಯಿಂ ದ ವಿಕ್ರಾಂತ್ ಟೈರ್ಸ್ ಕಂಪನಿ ಕಾರ್ಮಿಕರು ಮೈಸೂರು ನಗರದಲ್ಲಿ ಅತಿ ಹೆಚ್ಚು ಸಂಬಳ ಪಡೆಯುವ ಕಾರ್ಮಿಕರಾಗುತ್ತಾರೆ.

ಸಿಐಟಿಯು ನಾಯಕತ್ವದಿಂದಾಗಿ ಈ ಒಪ್ಪಂದಕ್ಕೆ ಬರಲಾಯಿತೆಂದು ಕಾರ್ಮಿಕರು ಮಾತನಾಡಿಕೊಳ್ಳುತ್ತಿದ್ದಾರೆ.

●

ಬಿಜಾಪೂರ :

ಜಾತೀಯ ದ್ವೇಷ ಬೆಳೆಸಲು ಸರಕಾರವೇ ಕಾರಣ

ಏಪ್ರಿಲ್ 26ರಂದು ಬಿಜಾಪುರದಲ್ಲಿ ಹಿಂದೂ ಮುಸಲ್ಮಾನರ ದಂಗೆಯಾಯಿತು. ತಾ॥ 25ರಂದು ಶಿವಾಜಿ ಜಯಂತಿ ದಿವಸವೇ ವಾತಾವರಣ ಕೆಟ್ಟಿತ್ತು. ಕಳೆದ 25 ವರ್ಷಗಳಿಂದಲೂ ಶಿವಾಜಿ ಜಯಂತಿ ಆಚರಿಸುತ್ತಿದ್ದ ಸ್ಥಳ ತಮ್ಮದೆಂದು ಮುಸಲ್ಮಾನರು ತಕರಾರು ಮಾಡಿದ್ದರಿಂದ ಸ್ಥಳ ಬದಲಾಯಿಸಬೇಕಾಯಿತು. ಆ ದಿವಸ ಪ್ರತಿಬಂಧಕಾಜ್ಞೆ ಇದ್ದರೂ ಕೂಡ ಪೋಲೀಸರ ಸಮಕ್ಷಮದಲ್ಲಿ ಮೆರವಣಿಗೆ ತೆಗೆಯಲಾಯಿತು. ಸ್ವಲ್ಪ ದೂರ ಹೋದ ನಂತರ ಪೋಲೀಸ್ ಅಧಿಕಾರಿಗಳು ಮೆರವಣಿಗೆ ತಡೆದರು. ಅನಂತರ ಮೆರವಣಿಗೆ ಮುಂದುವರಿಸಲಾಯಿತು. ತಾ॥ 26 ರಂದು ಬಸವ ಜ ಯಂ ತಿ ಶಿವ ಜ ಯಂ ತಿ ಆಚರಿಸುವರಿಬ್ಬರೂ ಸೇರಿ ಆ ದಿವಸ ಪ್ರ ಚಂ ಡ ಮೆರವಣಿಗೆ ತೆಗೆದರು. ಪ್ರ ತಿ ಬಂ ಧ ಕಾಜ್ಞೆ ಇರಲಿಲ್ಲ. ಈ ಮೆರವಣಿಗೆಯಲ್ಲಿ ಆರ್. ಎಸ್. ಎಸ್. ಮತ್ತು ಹಿಂದೂ ಏಕತಾ ಸಮಿತಿಯವರೇ ಎದ್ದು ಕಾ ಣು ತ್ತಿ ದ್ದ ರು. ಒಂದು ತಿಂಗಳ ಹಿಂದೆ ಬಿಜಾಪುರದಲ್ಲೇ ಜಾ ತಿ ಯ ಗಲಭೆ ನಡೆದ ನಂತರ ಹಿಂದೂ-ಮುಸಲ್ಮಾನರಿಬ್ಬರೂ ತಯಾರಿ ನಡೆಸಿದ್ದರು. ಎಲ್ಲ ಪಕ್ಷಗಳ ಶಾಂತಿ ಸಮಿತಿಯನ್ನು ನೇಮಿಸಲಾಗಿತ್ತು. ವಾ ತಾ ವ ರ ಣ ವನ್ನರಿತು ಪೋಲೀಸರೂ-ಜಿಲ್ಲಾಧಿಕಾರಿಗಳು ತಾ॥ 26 ರ ಮೆರವಣಿಗೆ ಕುರಿತು ಮುಂಜಾಗ್ರತೆ ವಹಿಸಬೇಕಾಗಿತ್ತು. ಆ ರೀತಿ ಮಾಡದೆ ಸಂಜೆ ಮೆರವಣಿಗೆಗೆ ಅವಕಾಶ ಮಾಡಿಕೊಟ್ಟರು. ಶಾಂತಿ ಸಮಿತಿಯವರಿಗೆ ತಿಳಿಸಿಲ್ಲ, ಸರಿಯಾಗಿ ಪೋಲಿಸ್ ಬಂದೋಬಸ್ತು ಇಲ್ಲ. ವ್ಯಾಪಾರಿ ಕೇಂದ್ರವಾದ ಗಾಂಧಿಚೌಕದ ಹತ್ತಿರ ಒಬ್ಬ ವ್ಯಕ್ತಿ ಮೆರವಣಿಗೆ ದಾಟಿದ ಎಂಬ ಒಂದೇ ಒಂದು ನೆವ ಆ ದಿವಸ ಜಾತೀಯ ದಂಗೆಗೆ ಕಾರಣೀಭೂತವಾಯಿತು. ಆ ಎರಡೂ ಜಾತಿಯ ಕಿಡಿಗೇಡಿಗಳು ಈ ಸಂದರ್ಭದ ದುರುಪಯೋಗ ಪಡಿಸಿಕೊಂಡು ರಾತ್ರಿ ಇಡಿ ಹ ಲ ವಾ ರು ಬೀಡಿ ಅಂಗಡಿ, ಒಂದು ಚಹಾದ ಅಂಗಡಿ, ಔಷದದ ಅಂಗಡಿ (ಎಲ್ಲಾ ಅಲ್ಪ ಸಂಖ್ಯಾತರದ್ದು)ಗಳನ್ನೆಲ್ಲ ಲೂಟಮಾಡಿ ಬೆಂಕಿಹಚ್ಚಿದರು. ಮರುದಿವಸ ಹಿಂದೂಗಳ ಅಂಗಡಿಗೂ ದಾಳಿ ಮಾ ಡು ವ ಪ್ರಯತ್ನ ನಡೆಯಿತು. ಈಗ ಬಹಿರಂಗಕ್ಕೆ ಶಾಂತಿ ನೆಲೆಸಿದ್ದರೂ ಅಂತರಂಗದಲ್ಲಿ ಹೊಗೆಯಾಡುತ್ತಿದೆ. ಎರಡೂ ಜಾತಿಯ ಮುಖಂಡರನ್ನು ಪೋಲೀಸರು ಬಂಧಿಸಿದ್ದಾರೆ. ಕಮ್ಯುನಿಸ್ಟ್ ಪಾರ್ಟಿ (ಮಾರ್ಕ್ಸ್‌ವಾದಿ,) ಶಾಂತಿಗಾಗಿ ಕರೆಕೊಟ್ಟಿದೆ.

ಕಳೆದೆರಡು ವರ್ಷಗಳಿಂದ ಸರ್ಕಾರವನ್ನು ವಿರೋಧಿ ಪಕ್ಷಗಳು ಈ ಜಾತಿಯತೆಯ ಕುರಿತು ಎಚ್ಚರಿಸಿದ್ದರು. ಆದರೆ ಸರ್ಕಾರ ಕಣ್ಣು ತೆರೆದಿಲ್ಲ. ಬಿಜಾಪುರ ಅಷ್ಟೆ ಅಲ್ಲ ಬೇರೆಡೆಯಲ್ಲೂ ಜಾತೀಯ ದ್ವೇಷ-ದಂಗೆ ನಡೆಯುತ್ತಿದೆ. ಇದನ್ನು ಎಲ್ಲರೂ ವಿರೋಧಿಸಿ ಜಾತೀಯ ಸೌಹಾರ್ದತೆ ಕಾಪಾಡಲು ಮುಂದಾಗಬೇಕು.

●

ಟೆಲಿಫೋನ್ ಬೀಡಿ ಡಿಪೋದಲ್ಲಿ ಕಾರ್ಮಿಕರಿಂದ ಘೆರಾವೊ

ಪದವು ಪ್ರದೇಶ ಬೀಡಿ ಕೆಲಸಗಾರರ ಸಂಘ (ಸಿಐಟಿಯು) ದ ನೇತೃತ್ವದಲ್ಲಿ 30-4-82 ರಂದು ಟೆಲಿಫೋನ್ ಬೀಡಿ ಡಿಪೋದಲ್ಲಿ ಮ್ಯಾನೇಜರರನ್ನು ಘೆರಾವೊ ಮಾಡಲಾಗಿತ್ತು.

ತಮಗೆ ಸಿಗಬೇಕಾಗಿದ್ದ ಹೆರಿಗೆ ಭತ್ತೆಯನ್ನು ಸುಮಾರುಒಂದೂಕಾಲು ವರ್ಷವಾದರೂ ಮಾ ಲೀ ಕ ರು ಕೊಡದೇ ಇದ್ದುದರಿಂದ ಈ ಘೆರಾವೋಕಾರ್ಯಕ್ರಮ ನಡೆಯಿತು.

ಕಾರ್ಮಿಕರ ನ್ಯಾಯಬದ್ಧ ಬೇಡಿಕೆ ಈಡೇರಿಸುವ ಬದಲು ಮ್ಯಾನೇಜರರು ಪೋಲಿಸರನ್ನು ಕರೆಯಿಸಿ ಕಾರ್ಮಿಕರನ್ನು ಬೆದರಿಸುವ ಪ್ರಯತ್ನನಡೆಸಿದರು. ಕಾರ್ಮಿಕರು ಬೆ ದ ರಿ ಕೆ ಗೆ ಸೊಪ್ಪು ಹಾಕದೇ ಇದ್ದುದರಿಂದ ಲೇಬರ್ ಆಫೀಸರ್ ಅವರು ಧಾವಿಸಿ ಬಂದು ಆಡಳಿತ ವರ್ಗದೊಟ್ಟಿಗೆ ಮಾತನಾಡಿದುದರ ಫಲವಾಗಿ ಮರುದಿನ ಹೆರಿಗೆ ಭತ್ತೆ ಕೊಡುವ ಆಶ್ವಾಸನೆ ದೊರೆತದ್ದರಿಂದ ಘೆರಾವೋ ಹಿಂತೆಗೆಯಲಾಯಿತು.

ಮರುದಿನ (1-5-82) ಲೇಬರ್ ಆಫೀಸರರ ಸಮಕ್ಷಮದಲ್ಲಿ ಹೆರಿಗೆ ಭತ್ತೆಯನ್ನು ವಿತರಣೆ ಮಾಡಲಾಯಿತು. ಈ ಕಾರ್ಯಕ್ರಮದ ನೇತೃತ್ವವನ್ನು ಕಾಂ॥ ಬಾಬೂ ದೇವಾಡಿಗರು ವಹಿಸಿದ್ದರು.

●

ಗೋದಿಗೆ ಕ್ವಿಂಟಾಲ್‌ಗೆ ೧೬೦ ರೂ. ಕೊಡಲು ಎ.ಐ.ಕೆ.ಎಸ್. ಒತ್ತಾಯ

ಗೋಧಿಗೆ ಪ್ರತಿ ಕ್ವಿಂಟಾಲಿಗೆ 160 ರೂ ನಿಗದಿ ಮಾಡುವಂತೆ ಸರ್ಕಾರವನ್ನು ಆಲ್ ಇಂಡಿಯಾ ಕಿ ಸಾ ನ್ ಸಭಾ ಒತ್ತಾಯಿಸಿದೆ. ಈ ಕುರಿತು ಎ.ಐ.ಕೆ.ಎಸ್.ನ ಪ್ರಧಾನ ಕಾರ್ಯದರ್ಶಿ ಕಾಂ॥ ಚಾತುನ್ನಿ ಮಾಸ್ಟರ್ (ಎಂ.ಪಿ.) ಅವರು ಹೇಳಿಕೆಯೊಂದನ್ನು ನೀಡಿದ್ದಾರೆ.

"ಗೋದಿ ಬೆಲೆ ಹೆಚ್ಚಿಸುವಂತೆ ಬೇರೆ ಬೇರೆ ರಾಜ್ಯ ಸರ್ಕಾರಗಳು ಶಿಫಾರಸ್ಸು ಮಾಡಿದ್ದನ್ನು ಕಡೆಗಣಿಸಿ, ಒಕ್ಕಲುತನ ಹು ಟ್ಟು ವ ಳಿ ಗೆ ವೆಚ್ಚ ಹೆಚ್ಚಾಗಿರುವುದನ್ನು ಗಮನಿಸದೆ ಭಾರತ ಸರ್ಕಾರ ಒಂದು ಕ್ವಿಂಟಾಲ್ ಗೋದಿಗೆ 140ರೂ ಬೆಂ ಬ ಲಿ ತ ಬೆಲೆ ನಿಗದಿ ಮಾಡಿದ್ದು ಖಂಡನೀಯ."

"ಕೇಂದ್ರ ಸರ್ಕಾರ ನಿಗದಿ ಪಡಿಸಿರುವ ಈ ಬೆಲೆ ತೀರಾ ಕಡಿಮೆಯಾಗಿದ್ದು, ರೈತ ಸಮುದಾಯದ ಹಿತ ಅನುಲಕ್ಷಿಸಿ ಕ್ವಿಂಟಾಲ್‌ಗೆ 160 ರೂ. ಯಂತೆ ನಿಗದಿ ಮಾಡಬೇಕು. ಆಹಾರ ಧಾನ್ಯಗಳ ಸಗಟು ವ್ಯವಹಾರವನ್ನು ಕೈವಶ ಮಾಡಿಕೊಂಡು ಸರ್ಕಾರದ ಪಡಿತರ ಅಂಗಡಿಗಳ ಮುಖಾಂತರ ವಿತರಣೆ ಮಾಡಬೇಕೆಂದು ಎಐಕೆಎಸ್ ಒತ್ತಾಯಿಸುತ್ತದೆ. ಗ್ರಾಹಕರಿಗೆ ಪೆಟ್ಟುಬೀಳದಂತೆ ಹಾನಿಯನ್ನು ಕೇಂದ್ರ ಸರ್ಕಾರ ನಿಗಾವಹಿಸಿ ರಿಯಾಯಿತಿ ದರದಲ್ಲಿ ಪೂರೈಸಬೇಕೆಂದು ಎಐಕೆಎಸ್ ಒತ್ತಾಯಿಸುತ್ತದೆ."

○

ಗಂಗಾವತಿ :

ಡಾ॥ ಅಂಬೇಡ್ಕರ್ ಜನ್ಮದಿನೋತ್ಸವ ಆಚರಿಸಲು ಅನುಮತಿ ನಿರಾಕರಣೆ

ದಲಿತ ಸಂಘರ್ಷ ಸಮಿತಿಯ ಗಂಗಾವತಿಯ ಘಟಕವು ಏಪ್ರಿಲ್ 30 ರಂದು ಡಾ॥ ಅಂಬೇಡ್ಕರ ಜನ್ಮದಿನೋತ್ಸವ ಆಚರಿಸಲು ಸಿದ್ಧತೆ ನಡೆಸಿದ್ದಾಗ, ನಿಷೇದಾಜ್ಞೆಯ ನೆಪತೋರಿಸಿ ಅನುಮತಿ ನಿರಾಕರಿಸಿರುವ ವರದಿಯಾಗಿದೆ.

ಗಂಗಾವತಿಯಲ್ಲಿ ಗೋಕಾಕ್ ವರದಿಯ ಜಾರಿಯ ಚಳುವಳಿಯ ನಿಮಿತ್ತ 25-4-82 ರವರೆಗೆ ನಿಷೇದಾಜ್ಞೆ ಜಾರಿಯಲ್ಲಿತ್ತು. ದ. ಸಂ. ಸ. ನವರು ಅಂಬೆಡ್ಕರ್ ಜಯಂತಿ ಆಚರಿಸುವ ಸಿದ್ಧತೆಯಲ್ಲಿರುವುದನ್ನು ಅರಿತು ಮತ್ತೆ ಒಂದುವಾರ ನಿಷೇಧಾಜ್ಞೆಯ ಅವಧಿಯನ್ನು ವಿಸ್ತರಿಸುವ ಆದೇಶವನ್ನು ತಹಸಿಲ್ದಾರ್ ಹೊರಡಿಸಿದರು. "ದಲಿತ ಸಂಘರ್ಷ ಸಮಿತಿಯವರು ಮೆರವಣಿಗೆ, ಪ್ರತಿಭಟನಾ ಕಾರ್ಯಕ್ರಮ ಹಾಕಿಕೊಂಡಿದ್ದರಿಂದ ನಿಷೇದಾಜ್ಞೆಯನ್ನು ಒಂದುವಾರ ವಿಸ್ತರಿಸುವ ಅವಶ್ಯಕತೆ ಇದೆ ಎಂದು ಪೋಲೀಸ್ ಸಬ್ ಇನ್ಸ್‌ಪೆಕ್ಟರ್ ತಿಳಿಸಿದ್ದು, ನನಗೆ ಅವು ತೃಪ್ತಿಕರ ಅಧಾರಗಳು ಎನಿಸಿದ್ದರಿಂದ ನಿಷೇಧಾಜ್ಞೆಯನ್ನು ವಿಸ್ತರಿಸುತ್ತಿರುವುದಾಗಿ" ಸ್ಪಷ್ಟವಾಗಿ ಉಲ್ಲೇಖಿಸಿದ್ದಾರೆ.

ಈ ನಿ ಷೇ ಧಾ ಜ್ಞೆ ಇದ್ದಾಗ್ಯೂ ಏಪ್ರಿಲ್ 26 ರಂದು ಬಸವ ಜಯಂತಿ ಆಚರಿಸಲು ಅನುಮತಿ ಕೊಡಲಾಗಿದೆ. ಅನುಮತಿ ಕೋರಿ ದಲಿತ ಸಂಘರ್ಷ ಸಮಿತಿಯವರು ಡಿ. ವೈ. ಎಸ್. ಪಿ. ಯನ್ನು ಭೇಟಿ ಮಾಡಿದರೂ ಅವರು ಅನುಮತಿ ನಿರಾಕರಿಸಿದ್ದಾರೆ.

ಇದು ಮೇಲ್ಜಾತಿ ಅಧಿಕಾರಿಗಳು ಹೂಡಿದ ತಂತ್ರವೇ ? ಅಥವಾ ದಲಿತರ ಹೆಸರಿನಲ್ಲಿ ಆಡಳಿತ ನಡೆಸುತ್ತಿರುವ ಸರಕಾರದ ನೈಜ್ಯಸ್ವರೂಪಕ್ಕೊಂದು ಉದಾಹರಣೆಯೇ ?

○

ಆರ್ಥಿಕ ಸಮೀಕ್ಷೆ :

—ಆರ್. ಚಂದ್ರ

ಜನ ವಿರೋಧಿ ಆಮದು - ರಫ್ತು ನೀತಿ

ಐ.ಎಂ.ಎಫ್.ನ ಬಿಗಿಹಿಡಿತ:

ಏಪ್ರಿಲ್ 5 ರಂದು ಹೊಸ ಆಮದು ಮತ್ತು ರಫ್ತು ನೀತಿಯನ್ನು ಇಂದಿರಾ ಸರ್ಕಾರ ಘೋಷಿಸಿತು. ದೇಶದ ಆರ್ಥಿಕ-ರಾಜಕೀಯ ವಿಷಯಗಳ ಗಳ ಕುರಿತು ಅಂತರಾಷ್ಟ್ರೀಯ ಹಣಕಾಸು ಸಂಸ್ಥೆಯ (ಐ. ಎಂ. ಎಫ್.) ಹಿಡಿತ ಬಿಗಿಯಾಗುತ್ತಿರುವುದನ್ನು ಈ ಹೊಸ ನೀತಿಯಿಂದ ಇನ್ನಷ್ಟು ಸ್ಪಷ್ಟವಾಗಿ ತಿಳಿಯಬಹುದು. ಭಾರತದಂತಹ ಅನೇಕ ಅಭಿವೃದ್ಧಿ ಹೊಂದುತ್ತಿರುವ ದೇಶಗಳು ವಿದೇಶಿ ವ್ಯಾಪಾರದಲ್ಲಿ ಭಾರೀ ಕೊರತೆಯನ್ನು ಅನುಭವಿಸುತ್ತಿವೆ. ವಿದೇಶಿವಿನಿಯದ ಕೊರತೆಯನ್ನು ಅನುಭವಿಸುತ್ತಿದ್ದು ತೀವ್ರ ದುಃಸ್ಥಿತಿಗೊಳಗಾಗುತ್ತಿರುವುದೂ ಉಂಟು. ಇಂತಹ ಬಿಕ್ಕಟ್ಟನ್ನು ಬಗೆಬರಿಸಲು ಸಹಜ ಮಾರ್ಗ ರಫ್ತು ಹೆಚ್ಚಿಸುವುದು, ಆಮದು ಕಡಿಮೆ ಮಾಡುವುದು.

ಆದರೆ ಅಂತರಾಷ್ಟ್ರೀಯ ಹಣಕಾಸು ಸಂಸ್ಥೆಯಿಂದ ವಿದೇಶಿ ವ್ಯಾಪಾರದಲ್ಲಿನ ಕೊರತೆಯನ್ನು ಹೋಗಲಾಡಿಸಲು ಸಾಲ ಪಡೆದ ಯಾವುದೇ ದೇಶಕ್ಕೆ 'ರಫ್ತು ಹೆಚ್ಚಿಸುವ ಮತ್ತು ಆಮದು ಕಡಿಮೆಗೊಳಿಸುವ' ಸಾರ್ವಭೌಮ ಹಕ್ಕು ಇಲ್ಲವಾಗಿದೆ. ವಿದೇಶಿ ವ್ಯಾಪಾರದ ಕೊರತೆಯ ನೆಪದಿಂದ ಆಮದು ನಿಯಂತ್ರಣ ನೀತಿಯನ್ನು ಅನುಸರಿಸಿದರೆ ಅಂತರಾಷ್ಟ್ರೀಯ ಹಣಕಾಸು ಸಂಸ್ಥೆ ತಾನು ವಾಗ್ದಾನ ಮಾಡಿದ ಸಾಲ ನೀಡಿಕೆಯನ್ನು ರದ್ದುಗೊಳಿಸಲು ಹಕ್ಕು ಪಡೆದಿರುವುದಾಗಿ ರಹಸ್ಯ ಒಪ್ಪಂದ ಭಾರತದೊಂದಿಗೂ ಮಾಡಿಕೊಂಡಿದೆ! ಅದಕ್ಕನುಗುಣವಾಗಿ ಭಾರತ ಸರ್ಕಾರ ಈ ಸಂಸ್ಥೆಗೆ ಆಶ್ವಾಸನೆ ನೀಡಿದೆ 1982-83 ಮತ್ತು 1983-84ರ ವರ್ಷಗಳಲ್ಲಿ ಆಮದು ನಿಯಂತ್ರಿಸುವ ಬದಲು ಉದಾರ ನೀತಿಯನ್ನು ಅನುಸರಿಸಲಿರುವುದು ಎಂದು. ಅಂತರಾಷ್ಟ್ರೀಯ ಹಣಕಾಸು ಸಂಸ್ಥೆ ಭಾರತಕ್ಕೆ ರೂ. 5000 ಕೋಟಿ ಸಾಲ ನೀಡಲು ಒಪ್ಪಿಕೊಂಡಿರುವಾಗಲೇ 1980-81 ರಲ್ಲಿ ಸರಕಾರ ಉದಾರ ಆಮದು ನೀತಿಯನ್ನು ಅನುಸರಿಸತೊಡಗಿತ್ತು.

ಉದಾರ ಆಮದು ನೀತಿ:

1982-83ರ ಹೊಸ ಸಡಿಲು ಆಮದು ನೀತಿಯಂತೆ, 85 ಹೊಸ ಕೈಗಾರಿಕಾ ಯಂತ್ರ ಸಾಮಗ್ರಿಗಳನ್ನೂ ಮತ್ತು 100 ಹೊಸ ಕಚ್ಚಾ ಪದಾರ್ಥಗಳನ್ನೂ, ಬಿಡಿ ಭಾಗಗಳನ್ನೂ ಹಾಗೂ ಮತ್ತಿತರ ಉಪಭೋಗ ವಸ್ತುಗಳನ್ನೂ ಅನಿರ್ಭಂದಿತವಾಗಿ ಆಮದು ಮಾಡಿಕೊಳ್ಳಬಹುದು. ಮುಕ್ತ ಮಾರುಕಟ್ಟೆ ಪ್ರದೇಶಗಳು (free Trade zone) ಮತ್ತು ನೂರಕ್ಕೆ ನೂರು ರಫ್ತಿಗಾಗಿಯೇ ಉತ್ಪಾದಿಸುವ ಕೈಗಾರಿಕಾ ಸಂಸ್ಥೆಗಳು ಇನ್ನು ಮುಂದೆ ತಮಗೆ ಖುಶಿ ಬಂದಷ್ಟು ಬೇಕು ಬೇಕಾದ ಸರಕು ಸಾಮಗ್ರಿಗಳನ್ನು ಲೈಸನ್ಸ್ ಇಲ್ಲದೇ ಆಮದುಮಾಡಿಕೊಳ್ಳಬಹುದು. ಈ ಸಂಸ್ಥೆಗಳ ಎಲ್ಲಾ ಉತ್ಪಾದನೆಗಳೂ ರಫ್ತಿಗಾಗಿಯೇ ಮಾಸಲಿಡಬೇಕೆಂಬುದೊಂದೇ ಶರತ್ತು. ಆದರೆ ಅದನ್ನು ತಪ್ಪಿಸಿಕೊಳ್ಳುವ ಉಪಾಯ ಸರ್ಕಾರವೇ ನಿರ್ಮಿಸಿದೆ!

ರಫ್ತಿಗಾಗಿಯೇ ಉತ್ಪಾದಿಸುವ ಕೈಗಾರಿಕಾ ಸಂಸ್ಥೆಗಳ ಉತ್ಪಾದನೆಗಳಲ್ಲಿ ಶೇ. 5ರಷ್ಟು ಅಥವಾ ಸರ್ಕಾರವೇ ನಿಗದಿಮಾಡಿದ ಪ್ರಮಾಣದಷ್ಟು ಹಾಳುಪಾಳು (wasteges) ಇರಬಹುದು. ಉತ್ಪಾದನೆಯ ಈ ಅಂಶವನ್ನು ರಫ್ತು ಮಾಡಬೇಕಾಗಿಲ್ಲ. ಅವುಗಳನ್ನು ಅಂತರಿಕ ಮಾರುಕಟ್ಟೆಯಲ್ಲಿ ಏರಿಕೆಯ ದರದಲ್ಲಿ ಪೈಪೋಟಿಯಿಲ್ಲದೆ ಮಾರಾಟ ಮಾಡಿ ಲಾಭಗಿಟ್ಟಿಸಬಹುದು. ಆದುದರಿಂದ ರಫ್ತಿಗಾಗಿ ನೂರಕ್ಕೆ ನೂರರಷ್ಟು ಉತ್ಪಾದಿಸುವ ಕೈಗಾರಿಕಾ ಸಂಸ್ಥೆಗಳು ವಾಸ್ತವವಾಗಿ ತಮ್ಮ ಉತ್ಪಾದನೆಗಳೆಲ್ಲವನ್ನೂ ರಫ್ತು ಮಾಡಬೇಕಾದ್ದಿಲ್ಲ. ಹಾಳುಪಾಳು ಅಂಶ ಒಂದೊಂದು ಸಂಸ್ಥೆಗೂ ಸರ್ಕಾರ ನಿರ್ಧರಿಸಿದಂತೆ ಬೇರೆ ಬೇರೆ ಪ್ರಮಾಣದ್ದಿರಬಹುದು. ಅವುಗಳನ್ನು ಅಂತರಿಕ ಮಾರುಕಟ್ಟೆಯಲ್ಲಿ ಅಧಿಕ ಲಾಭಗಿಟ್ಟಿಸಬಹುದು.

ಇಷ್ಟೇ ಅಲ್ಲದೆ, 1982-83ರ ಕೇಂದ್ರ ಮುಂಗಡ ಪತ್ರದಲ್ಲಿ ಮುಕ್ತ ಮಾರುಕಟ್ಟೆ ಪ್ರದೇಶಗಳಲ್ಲಿನ ಕೈಗಾರಿಕಾ ಸಂಸ್ಥೆಗಳು ತಮ್ಮ ಉತ್ಪಾದನೆಯ ಶೇ. 25 ರಷ್ಟನ್ನು ಅಂತರಿಕ ಮಾರುಕಟ್ಟೆಯಲ್ಲಿ ಮಾರಬಹುದೆಂದು ಹಣಕಾಸು ಮಂತ್ರಿ ಪ್ರಣಬ ಕುಮಾರ ಮುಖರ್ಜಿಯವರು ಘೋಷಿಸಿದ್ದಾರೆ. ಈ ಸಂಸ್ಥೆಗಳು ಅನಿರ್ಭಂದಿತವಾಗಿ ಆಮದು ಮಾಡಿಕೊಳ್ಳಬಹುದಾಗಿದೆ!

ಬಹು ರಾಷ್ಟ್ರೀಯ ಸಂಸ್ಥೆಗಳಿಗೆ ಅನುಕೂಲ :

ಹೊಸ ಆಮದು – ರಫ್ತು ನೀತಿಯಿಂದಾಗಿ ದೇಶದ ವಿದೇಶಿ ವ್ಯಾಪಾರದ ಕೊರತೆಯ ಸಮಸ್ಯೆಯೊಂದಿಗೇ, ಬಹುರಾಷ್ಟ್ರೀಯ ಸಂಸ್ಥೆಗಳಿಗೆ ಇನ್ನಷ್ಟು ಗಣನೀಯ ರಿಯಾಯಿತಿಕೊಟ್ಟಂತಾಯಿತು. ದಕ್ಷಿಣ ಕೊರಿಯದ ಮಾದರಿಯಲ್ಲಿ ರಚಿಸಿದ ನಮ್ಮ ದೇಶದ ಮುಕ್ತ ಮಾರುಕಟ್ಟೆ ಪ್ರದೇಶಗಳಲ್ಲಿನ ಬಹುರಾಷ್ಟ್ರೀಯ ಸಂಸ್ಥೆಗಳು ಅಭಿವೃದ್ಧಿ ಹೊಂದಿದ ರಾಷ್ಟ್ರಗಳಿಗೆ ರಫ್ತು ಮಾಡಲು ಬೇಕಾದ ಗುಣಮಟ್ಟದ ವಸ್ತುಗಳನ್ನು ಉತ್ಪಾದಿಸಲು ಸೋತಿವೆ. ಈ ಪ್ರದೇಶಗಳು ನಮ್ಮ ದೇಶದ ಅಂತರಿಕ ವ್ಯವಹಾರಗಳಲ್ಲಿ ಹಸ್ತಕ್ಷೇಪಮಾಡಿ ತಮ್ಮ ಪ್ರಭಾವ ಬೀರುವಷ್ಟು ಪ್ರಯೋಜನ ಆಗಿದೆ, ಅಷ್ಟೆ. ಹೊಸ ಆಮದು ನೀತಿಯ ರಿಯಾಯಿತಿಗಳು ಈ ಸಂಸ್ಥೆಗಳಿಗೆ ಇನ್ನಷ್ಟು ಅನುಕೂಲವಾದವು. ಈ ಬಹುರಾಷ್ಟ್ರೀಯ ಸಂಸ್ಥೆಗಳು ಹೊಸ ನೀತಿಯಂತೆ ಭಾರತಕ್ಕೆ ಬಂದು ನಿರಾತಂಕವಾಗಿ ಆಮದು ಮಾಡಿಕೊಳ್ಳಬಹುದು. ಸರ್ಕಾರ ನಿರ್ಧರಿಸಿದಷ್ಟು ಅಂಶ ರಫ್ತುಮಾಡಿ, ಉಳಿದದ್ದನ್ನು ದೇಶದ ಆಂತರಿಕ ಮಾರುಕಟ್ಟೆಯಲ್ಲಿ ಅಧಿಕ ಲಾಭಕ್ಕೆ ಮಾರಾಟ ಮಾಡಬಹುದು.

ಹೊಸ ಆಮದು ನೀತಿಯ ಎರಡು ಮುಖ್ಯ ಅಂಶಗಳನ್ನು ಗಮನಿಸಬೇಕು.

1. ತಾಂತ್ರಿಕ ಆಮದಿನಲ್ಲಿ ಉದಾರ ನೀತಿ :

ತಾಂತ್ರಿಕ ಅಭಿವೃದ್ಧಿ ಹಾಗೂ ಆಧುನೀಕರಣದ ನೆಪದಿಂದ ಸಾಮಗ್ರಿಗಳ, ಸ್ಯಾಂಪಲ್ಸ್‌ಗಳ, ಡಿಸೈನ್‌ಗಳ ಮತ್ತು ಪ್ರೊಟೋಟೈಪ್‌ಗಳ ಆಮದಿಗೆ ಉದಾರ ನೀತಿಯನ್ನು ಘೋಷಿಸಲಾಗಿದೆ. ಈ ಉದ್ದೇಶಗಳಿಗೆ ಪ್ರತಿ ಒಂದು ಕೈಗಾರಿಕಾ ಘಟಕವೂ ಆಮದು ಮಾಡಬಹುದಾದ ಮೌಲ್ಯಮಿತಿಯನ್ನು ಡಾಲರ್ 2.5 ಲಕ್ಷದಿಂದ ಡಾಲರ್ 5.0 ಲಕ್ಷಕ್ಕೇರಿಸಲಾಗಿದೆ. ಈ ನಿಗದಿತ ಮೌಲ್ಯದಷ್ಟು ಆಮದನ್ನು ಸರ್ಕಾರದ ಸಂಬಂಧಪಟ್ಟ ಇಲಾಖೆಯ ಅನುಮತಿ ಇಲ್ಲದೇ ಮಾಡಬಹುದು. ಈ ಸಂಸ್ಥೆಗಳು ತಮ್ಮ ಉತ್ಪಾದನೆಯ ಶೇ. 25ರಷ್ಟು ರಫ್ತು ಮಾಡಬೇಕೆಂದು ಒಂದೇಒಂದು ಶರತ್ತು. ಶೇ. 5(ರಷ್ಟು ರಫ್ತು ಮಾಡುವ ಕೈಗಾರಿಕಾ ಸಂಸ್ಥೆಗಳು ಇಂಧನದಲ್ಲಿ ಉಳಿತಾಯ ಮಾಡಲು ಮತ್ತು ಕಚ್ಚಾ ಪದಾರ್ಥಗಳ ಬಳಕೆಯಲ್ಲಿ ಮಿತವ್ಯಯ ಮಾಡಲು ತಾಂತ್ರಿಕ ಅಭಿವೃದ್ಧಿಗೆ ಎಷ್ಟುಬೇಕಾದರೂ ಆಮದುಮಾಡಿಕೊಳ್ಳಬಹುದು ಪರಿಣಾಮ ? ವಿದೇಶಿ ತಾಂತ್ರಿಕತೆಯನ್ನು ಮುಕ್ತವಾಗಿ ಬರಮಾಡಿಕೊಂಡು ಸ್ವದೇಶಿ ತಂತ್ರಜ್ಞಾನವನ್ನು ವಿನಾಶಗೊಳಿಸಿ ದೇಶದಕೈಗಾರಿಕೆಯನ್ನು ಇನ್ನಷ್ಟು ಪರಾವಲಂಬನೆಗೊಳಿಸುವುದು.

2. ಸುಂಕ ಇಲ್ಲದೆ ಆಮದು :

ರಫ್ತುಗಾರರಿಗೆ ಸುಂಕ ಇಲ್ಲದೆ ಆಮದು ಮಾಡುವ ಸಾಮಗ್ರಿಗಳ ಪಟ್ಟಿಯನ್ನು ಇನ್ನಷ್ಟು ವಿಸ್ತರಿಸಲಾಗಿದೆ. ಸುಂಕ ಇಲ್ಲದೆ ಆಮದುಮಾಡಿಕೊಳ್ಳುವ ಅವಕಾಶ ಸ್ವದೇಶಿ ಬಂಡವಾಳಗಾರರಿಗೂ ಉಂಟು. ಅವರು ರಫ್ತುಗಾರರೇ ಆಗಬೇಕೆಂದಿಲ್ಲ. ಅವರು ತಮ್ಮ ಸಿದ್ಧ ವಸ್ತುಗಳನ್ನು ಅಂತಿಮವಾಗಿ ರಫ್ತುಗಾರರಿಗಾಗಲೀ, ಮುಕ್ತ ಮಾರುಕಟ್ಟೆ ಪ್ರದೇಶಗಳಿಗಾಗಲೀ, ವಿಶ್ವ ಬ್ಯಾಂಕಿನಿಂದ ಧನ ಸಹಾಯ ಪಡೆದು ಕೈಗಾರಿಕೆ ಸ್ಥಾಪಿಸುವುದಕ್ಕಾಗಲೀ ಮಾರಾಟ ಮಾಡಿದರಾಯಿತು. ಪರಿಣಾಮ ? ರಫ್ತುಗಾರರಿಗೆ ಭಾರೀ ಪ್ರಮಾಣದಲ್ಲಿ ಸಹಾಯ ಧನ. ಅಂತರಾಷ್ಟ್ರೀಯ ಹಣಕಾಸು ಸಂಸ್ಥೆಗೆ ಭಾರತ ಸರಕಾರ ಆಶ್ವಾಸನೆಕೊಟ್ಟಂತೆ, ಜನಸಾಮಾನ್ಯರ ಬಳಕೆಗೆ ಬೇಕಾದ ಆಹಾರ ಧಾನ್ಯಗಳ ಸರಬರಾಜಿಗೆ ಸಹಾಯ ಧನದಲ್ಲಿ ಕಡಿತ, ರಫ್ತು ವ್ಯಾಪಾರಕ್ಕೆ ಮಾತ್ರ ಸಹಾಯ ಧನದಲ್ಲಿ ಹೆಚ್ಚಳ! ಈ ಸಹಾಯ ಧನ ಹೊಸ ರಫ್ತಿಗೆ ಮಾತ್ರವಲ್ಲ, ಇದುತನಕದ ರಫ್ತಿಗೂ ದೊರಕುವುದು. ಅರ್ಥಾತ್, ಇದುತನಕ ರಫ್ತುದಾರ ಬಂಡವಾಳಗಾರರು ಆಮದು ಮಾಡುತ್ತಿದ್ದ ಸಾಮಗ್ರಿಗಳಿಗೆ ಇನ್ನು ಮುಂದೆ ಸುಂಕ ಇಲ್ಲ! ಬಡವರಿಂದ ಕಸಿದು ಬಂಡವಾಳಗಾರರಿಗೆ ಕೊಡುವುದೇ ಹೊಸ ಆಮದು ರಫ್ತು ನೀತಿಯ ಉದ್ದೇಶವಾಗಿದೆ.

ದುಷ್ಪರಿಣಾಮಗಳು :

1. ಸಣ್ಣ ಹಾಗೂ ಮಧ್ಯಮ ಮಟ್ಟದ ಕೈಗಾರಿಕಾ ಸಂಸ್ಥೆಗಳ ಸೋಲು ಭಾರತದ ಆಂತರಿಕ ಮಾರುಕಟ್ಟೆಯನ್ನು ವಿದೇಶಿ ಬಹುರಾಷ್ಟ್ರೀಯ ಸಂಸ್ಥೆಗಳ ಸಾಮಗ್ರಿಗಳಿಗೆ ಮುಕ್ತದ್ವಾರ ನೀಡುವುದರಿಂದ, ಸ್ವದೇಶಿ ಸಣ್ಣ ಹಾಗೂ ಮಧ್ಯಮ ಮಟ್ಟದ ಕೈಗಾರಿಕಾ ಸಂಸ್ಥೆಗಳು ಮಾರುಕಟ್ಟೆಯ ಕೊರತೆಯಿಂದ ದಿವಾಳಿಯಾಗುತ್ತಿವೆ. ಐ.ಎಂ.ಎಫ್.ನ ಶರತ್ತಿನಂತೆ ಸರ್ಕಾರ ಅನುಸರಿಸುತ್ತಿರುವ ಸಾಲ ನಿಯಂತ್ರಣ ನೀತಿಯಿಂದ ದೇಶದ ಸಹಸ್ರಾರು ಕೈಗಾರಿಕಾ ಸಂಸ್ಥೆಗಳು ತೀವ್ರ ಬಿಕ್ಕಟನ್ನು ಎದುರಿಸುತ್ತಿವೆ. ತಾ॥ 26-3-82 ರಂದು ಲೋಕ ಸಭೆಗೆ ನೀಡಿದ ಅಂಕೆ ಸಂಖ್ಯೆಗಳಂತೆ ದೇಶದಲ್ಲಿ ಸದ್ಯ ಸುಮಾರು 2500 ಸಣ್ಣ ಹಾಗೂ ಮಧ್ಯಮ ಮಟ್ಟದ ಕೈಗಾರಿಕಾ ಸಂಸ್ಥೆಗಳು ದಿವಾಳಿಯಾಗುವ ಸ್ಥಿತಿಯಲ್ಲಿವೆ. ಪರಿಣಾಮ, ಅವುಗಳಲ್ಲಿ ದುಡಿಯುತ್ತಿರುವ ಲಕ್ಷಾಂತರ ಕಾರ್ಮಿಕರು ಕೆಲಸ ಕಳೆದುಕೊಂಡು ಅವರ ಕುಟುಂಬಗಳು ಹೊಟ್ಟೆ ಬಟ್ಟೆಗಿಲ್ಲದೆ ಕಷ್ಟಪಡಬೇಕಾಗುವುದು.

2. ಸ್ವದೇಶಿ ತಂತ್ರಜ್ಞಾನದ ಅಲಕ್ಷ ಮತ್ತು ನಿಷ್ಪ್ರಯೋಜನ : ಭಾರತದ ಕೈಗಾರಿಕೆಗಳನ್ನು ಹೆಚ್ಚು ಹೆಚ್ಚು ವಿದೇಶಿ ತಂತ್ರಜ್ಞಾನಕ್ಕೆ ಒಳಪಡಿಸುವುದರಿಂದ ಸ್ವದೇಶಿ ತಂತ್ರಜ್ಞಾನ ವ್ಯರ್ಥವಾಗುತ್ತಿದೆ. ಇತ್ತೀಚೆಗಿನ ವರ್ಷಗಳಲ್ಲಿ ಅನಿಯಂತ್ರಿತವಾಗಿ ವಿದೇಶಿ ನೆರವು, ತಂತ್ರಜ್ಞಾನವನ್ನು ಸ್ವಾಗತಿಸುತ್ತಿರುವುದರಿಂದ, ಭಾರತದಲ್ಲಿ ಹಲವಾರು ವರ್ಷಗಳ ಪರಿಶ್ರಮದಿಂದ ಅಭಿವೃದ್ಧಿಗೊಳಿಸಿದ ಶ್ರೇಷ್ಠ ಮಟ್ಟದ ಅನ್ವೇಷಣೆ, ಅಭಿವೃದ್ಧಿ, ತಂತ್ರಜ್ಞಾನ ತಳಪಾಯವು ನಿಷ್ಪ್ರಯೋಜನವಾಗುತ್ತಿದೆ ಎಂದು ಕೇರಳದ ವಿಜ್ಞಾನ, ತಂತ್ರಜ್ಞಾನ ಸಮಿತಿಯ ಮಾಜಿ ಕಾರ್ಯದರ್ಶಿ ಶ್ರೀ ಕೆ. ವಿಜಯಚಂದ್ರನ್ ಅವರು ಮದ್ರಾಸಿನಲ್ಲಿ ಇತ್ತೀಚಿಗೆ ಇಂಡಿಯನ್ ಸ್ಕೂಲ್ ಆಫ್ ಸೋಷಿಯಲ್ ಸೈಯನ್ಸ್ ಸಂಸ್ಥೆಯನ್ನೂದ್ದೇಶಿಸಿ ಮಾತನಾಡುತ್ತಾ ತಮ್ಮ ವಿಷಾಧವನ್ನು ವ್ಯಕ್ತಪಡಿಸಿದರು. (ಇಂಡಿಯನ್ ಎಕ್ಸ್‌ಪ್ರೆಸ್ 8-5-82)

ರಾಷ್ಟ್ರೀಯ ಪ್ರಯೋಗ ಶಾಲೆಗಳಲ್ಲಿನ ಅತ್ಯಂತ ಬೆಲೆಬಾಳುವ ತಾಂತ್ರಿಕ ಉಪಕರಣಗಳು ಅಭಿವೃದ್ಧಿ ಯೋಜನೆಗಳು ಹಿಂದೆ ಬೀಳುತ್ತಿವೆ. ಅವುಗಳಲ್ಲಿ ದೀರ್ಘಕಾಲದ ತರಬೇತಿ ಪಡೆದ ತಂತ್ರಜ್ಞರು ನಿರಾಶರಾಗುತ್ತಿದ್ದಾರೆ. ಅನವಶ್ಯಕ ವಿಷಯಗಳಿಗೆಲ್ಲಾ ವಿದೇಶಿ ತಂತ್ರಜ್ಞಾನದ ಸ್ವೀಕಾರದಿಂದ ಸ್ವಾವಲಂಬನೆಯ ಗುರಿ ಬಿಟ್ಟು ಪರಾವಲಂಬನೆ ಹೆಚ್ಚುತ್ತಿದೆ. ರಾಷ್ಟ್ರೀಯ ಉತ್ಪಾದನೆಯಲ್ಲಿ ಕೈಗಾರಿಕೆಯ ಪಾತ್ರವು ಇತ್ತೀಚೆಗಿನ ವರ್ಷಗಳಲ್ಲಿ ಶೇ 26 ರಿಂದ ಶೇ 20 ಕ್ಕೆ ಇಳಿದಿದ್ದರೂ, ವಿದೇಶಿ ಸಹಕಾರದ ಹೊಸ ಯೋಜನೆಗಳು ವರ್ಷಕ್ಕೆ 100 ರಿಂದ 400ಕ್ಕೆ ಏರಿದೆ? ಅವು ಮುಖ್ಯವಾದ ವಿಷಯಗಳಿಗೆ ವಿದೇಶಿ ನೆರವು ತಂತ್ರಜ್ಞಾನಗಳ ಅವಲಂಬನೆಯಿಂದ ದೇಶದ ಅತಿ ಮುಖ್ಯವಾದ ಸಿರಿಸಂಪನ್ಮೂಲ ಪೋಲಾಗುತ್ತದೆ, ರಾಷ್ಟ್ರೀಯ ಪ್ರಯೋಗ ಶಾಲೆಗಳಲ್ಲಿನ ವಿಜ್ಞಾನಿಗಳ, ತಂತ್ರಜ್ಞಾನಿಗಳ ಅನೇಕಾನೇಕ ಯೋಜನೆಗಳನ್ನು ಇಂದಿರಾ ಸರಕಾರ ಮತ್ತು ಯೋಜನಾ ಆಯೋಗ ತಳ್ಳಿ ಹಾಕುತ್ತಿದೆ. ವಿದೇಶೀ ಸಹಾಯ, ತಂತ್ರಜ್ಞಾನವನ್ನು ಅವಶ್ಯಕವಾಗಿ ಬರಮಾಡಿಕೊಳ್ಳುತ್ತಿದೆ. ವಿಧ್ಯಾಮಾನ ರಾಷ್ಟ್ರೀಯ ಅಪಮಾನ!

ಬಹುರಾಷ್ಟ್ರೀಯ ಸಂಸ್ಥೆಗಳು ತಮ್ಮ ಅಭಿವೃದ್ಧಿ ಹೊಂದಿದ ಬಂಡವಾಳಶಾಹಿ ರಾಷ್ಟ್ರಗಳಲ್ಲಿನ ಆರ್ಥಿಕ ದುಃಸ್ಥಿತಿಯಿಂದ ಉಂಟಾದ ಮಾರುಕಟ್ಟೆಯ ಕೊರತೆಯನ್ನು ಅಭಿವೃದ್ಧಿ ಹೊಂದುತ್ತಿರುವ ರಾಷ್ಟ್ರಗಳಲ್ಲಿ ಪ್ರವೇಶಿಸಿ ಭರತಿ ಮಾಡಿಕೊಳ್ಳುತ್ತಿವೆ. ಪರಿಣಾಮವಾಗಿ ಭಾರತದಂತಹ ಅಭಿವೃದ್ಧಿ ಹೊಂದುತ್ತಿರುವ ದೇಶಗಳ ಆರ್ಥಿಕ ಸಮಸ್ಯೆ, ವಿದೇಶಿ ವ್ಯಾಪಾರದಲ್ಲಿನ ಕೊರತೆ, ಹಣದುಬ್ಬರ, ನಿರುದ್ಯೋಗ ಹೆಚ್ಚುತ್ತಲೇ ಇದೆ.

3. ರಫ್ತು ವ್ಯಾಪಾರದಲ್ಲಿ ಸ್ಥಗಿತ : ಇಂದಿರಾ ಸರಕಾರ ಅಂತರಾಷ್ಟ್ರೀಯ ಹಣಕಾಸು ಸಂಸ್ಥೆಯ ನಿರ್ದೇಶನದಂತೆ, ಉದಾರ ಆಮದು ನೀತಿಯಿಂದೆ ರಫ್ತು ಹೆಚ್ಚಿಸಿ ನಮ್ಮ ದೇಶದ ವಿದೇಶಿ ವ್ಯಾಪಾರದ, ವಿದೇಶಿ ವಿನಿಮಯದ ಕೊರತೆಯನ್ನು ಹೋಗಲಾಡಿಸಲು ಉದ್ದೇಶಿಸಿದೆ. ಆದರೆ, ಈ ಧೋರಣೆಯು ಕಾರ್ಯಗತವಾಗುತ್ತಿದ್ದಂತೆ, ನಮ್ಮ ದೇಶದ ಆಮದು ಹೆಚ್ಚುತ್ತಿದೆಯೇ ಹೊರತು, ರಫ್ತು ಸ್ಥಗಿತವಾಗುತ್ತಿದೆ. ಇತ್ತೀಚಿಗೆ ಕುಸಿಯುತ್ತಿದೆ. ಸೋವಿಯೆತ್ ಯೂನಿಯನ್ ಒಳಗೊಂಡು ಸಮಾಜವಾದಿ ರಾಷ್ಟ್ರಗಳೊಂದಿಗೆ ನಮ್ಮ ದೇಶದ ರಫ್ತು ವ್ಯಾಪಾರ ಹೆಚ್ಚುತ್ತಿದೆ. ಆದರೆ ನಮ್ಮ ದೇಶದ ರಫ್ತು ವ್ಯಾಪಾರ ಬಂಡವಾಳಶಾಹಿ ರಾಷ್ಟ್ರಗಳೊಂದಿಗೆ 1976-77 ರಿಂದ ಸ್ಥಗಿತವಾಗುತ್ತಿದೆ.

(7ನೇ ಪುಟ ನೋಡಿ)

ಪಶ್ಚಿಮ ಬಂಗಾಳ ವಿಧಾನ ಸಭಾ ಚುನಾವಣೆ – ಒಂದು ಹಿನ್ನಲೆ

ಭಾರತ ವಿಭಜನೆಯಾದ ನಂತರ ಅಸ್ತಿತ್ವಕ್ಕೆ ಬಂದ ಪಶ್ಚಿಮ ಬಂಗಾಳದಲ್ಲಿ ನಡೆಯುವ 9ನೇ ಚುನಾವಣೆಯೇ 1982ರ ಮೇ 19 ರಂದು ನಡೆಯುವುದು. 1946ರಲ್ಲಿ ನಡೆದ ಚುನಾವಣೆಯಲ್ಲಿ ಮುಸ್ಲಿಂ ಲೀಗಿಗೆ ಬಹುಮತ ಲಭಿಸಿ ಹುಸನ್ ಸುಹ್ರಾವರ್ದಿ ಪ್ರಧಾನ ಮಂತ್ರಿಯಾದರು. ರೈಲ್ವೆ ಕಾರ್ಮಿಕ ಕ್ಷೇತ್ರದಿಂದ ಹುಮಯೂನ್ ಕಬೀರರನ್ನು ಸೋಲಿಸಿ ವಿಧಾನ ಸಭೆಗೆ ಬಂದ ಕಾಂ| ಜ್ಯೋತಿ ಬಸು, ರತನ್‌ಲಾಲ್ ಭ್ರಮನ್, ರೂಪನಾರಾಯಣ್‌ರಾಯ್ ಎಂಬೀ 3 ಎಂ.ಎಲ್.ಎ.ಗಳೇ ಅಂದು ಕಮ್ಯೂನಿಸ್ಟ್ ಪಕ್ಷಕ್ಕೆ ಇದ್ದದು. ಸುಹ್ರಾವರ್ದಿ ಸರ್ಕಾರ 1947ರವರೆಗೆ ಮುಂದುವರಿಯಿತು. ಭಾರತ ವಿಭಜನೆಯಾದ ಮೇಲೆ ಮುಸ್ಲಿಂ ಲೀಗ್ ಎಂ.ಎಲ್.ಎ.ಗಳ ಬಹುಭಾಗ ಪೂರ್ವ ಪಾಕಿಸ್ಥಾನಕ್ಕೆ ಹೋದ ಕಾರಣ ಅದುವರೆಗೆ ವಿರೋಧ ಪಕ್ಷವಾಗಿದ್ದ ಕಾಂಗ್ರೆಸ್ ಪಕ್ಷ ಪಶ್ಚಿಮ ಬಂಗಾಳದ ಅಧಿಕಾರಕ್ಕೆ ಬಂತು. ಡಾ| ಫ್ರಫುಲ್ಲ ಘೋಷ್ ಬಂಗಾಳದ ಮೊದಲನೆಯ ಮುಖ್ಯ ಮಂತ್ರಿಗಳಾದರು.

1952ರಲ್ಲಿ ನಡೆದ ಸಾರ್ವತ್ರಿಕ ಚುನಾವಣೆಯಲ್ಲಿ ಕಾಂಗ್ರೆಸ್ ಪಕ್ಷ ಬಹುಮತ ಗಳಿಸಿತು. ಕಮ್ಯೂನಿಸ್ಟ್ ಪಕ್ಷಕ್ಕೆ 28 ಸ್ಥಾನಗಳು ಲಭಿಸಿತು. ಡಾ| ಬಿಧಾನ್‌ರಾಯ್ ಮುಖ್ಯ ಮಂತ್ರಿಗಳಾದರು. 1957ರ ಎರಡನೇ ಸಾರ್ವತ್ರಿಕ ಚುನಾವಣೆಯಲ್ಲಿ ಪಿ.ಎಸ್.ಪಿ. ಮುಂತಾದ ಪಕ್ಷಗಳೊಂದಿಗೆ ಕಮ್ಯೂನಿಸ್ಟ್ ಪಕ್ಷ ಹೊಂದಾಣಿಕೆಯನ್ನು ಮಾಡಿಕೊಂಡಿದ್ದರೂ ಕಾಂಗ್ರೆಸ್ಸಿಗೆ ಬಹುಮತ ದೊರೆಯಿತು. ಕಮ್ಯೂನಿಸ್ಟ್ ಪಕ್ಷದ ನಾಯಕ ಕಾಂ. ಜ್ಯೋತಿ ಬಸುರವರು ಅಧಿಕೃತವಾಗಿ ವಿರೋಧ ಪಕ್ಷದ ನಾಯಕರಾಗಿ ಚುನಾಯಿತರಾದರು. 1958 ಮಾರ್ಚ್ 10 ರಂದು ಸಿದ್ಧಾರ್ಥ ಶಂಕರ್‌ರಾಯ್ ಕಾಂಗ್ರೆಸ್ ಮಂತ್ರಿ ಮಂಡಳಕ್ಕೆ ರಾಜಿನಾಮೆಕೊಟ್ಟರು. ಕಾಂಗ್ರೆಸ್ ಮಂತ್ರಿ ಮಂಡಳಕ್ಕೆದುರಾಗಿ ಅವಿಶ್ವಾಸ ಠರಾವನ್ನು ಮೊಟ್ಟಮೊದಲನೆಯದಾಗಿ ವಿರೋಧ ಪಕ್ಷದ ನಾಯಕ ಕಾಂ| ಜ್ಯೋತಿ ಬಸುರವರು ತಂದರು. ನಿರ್ಣಯ 64–157 ಮತಗಳಿಂದ ಪರಾಭವ ಹೊಂದಿತು.

1962ರ ಚುನಾವಣೆಯಲ್ಲಿ ಪ. ಬಂಗಾಳದಲ್ಲಿ ಪ್ರಥಮವಾಗಿ ವಾಮ ಪಕ್ಷಗಳ ರಂಗ ರೂಪಗೊಂಡಿತು. 260 ಸದಸ್ಯರಿರುವ ವಿಧಾನ ಸಭೆಯಲ್ಲಿ ಕಮ್ಯೂನಿಸ್ಟ್ ಪಕ್ಷ, ಫಾರ್‌ವಾರ್ಡ್ ಬ್ಲಾಕ್, ಆರ್.ಎಸ್.ಪಿ, ಮಾರ್ಕ್ಸ್‌ವಾದಿ ಫಾರ್‌ವರ್ಡ್‌ಬ್ಲಾಕ್, ರಿವಲ್ಯೂಷನರಿ ಕಮ್ಯೂನಿಸ್ಟ್ ಪಾರ್ಟಿಗಳು ಸೇರಿದ ವಾಮಪಕ್ಷಕ್ಕೆ 50 ಸ್ಥಾನಗಳು ಲಭಿಸಿತು. ಡಾ| ಬಿದಾನ್ ಚಂದ್ರ ರಾಯ್ ಮುಖ್ಯ ಮಂತ್ರಿಯಾಗಿ ಅಧಿಕಾರ ವಹಿಸಿಕೊಂಡರು. 1962ರ ಜುಲೈ 1 ರಂದು ಬಿದಾನ್‌ರಾಯ್ ನಿಧನರಾದ ಕಾರಣ ಪ್ರಫುಲ್ಲಸೇನ್ ಮುಖ್ಯ ಮಂತ್ರಿಗಳಾದರು.

ಪಶ್ಚಿಮ ಬಂಗಾಳ ವಿಧಾನ ಸಭೆ – ಕಳೆದ 4 ಚುನಾವಣೆಗಳಲ್ಲಿ ವಿವಿಧ ಪಕ್ಷಗಳಿಗೆ ಲಭಿಸಿದ ಸ್ಥಾನಗಳು

	1967	1969	1971	1977
ಸಿ.ಪಿ.ಐ. (ಎಂ)	43	80	113	177
ಫಾರ್‌ವಾರ್ಡ್ ಬ್ಲಾಕ್	13	21	3	25
ಆರ್.ಎಸ್.ಪಿ.	6	12	3	20
ಆರ್.ಸಿ.ಪಿ.ಐ.	—	1	3	3
ಫಾರ್‌ವರ್ಡ್ ಬ್ಲಾಕ್ (ಮಾರ್ಕ್ಸಿಸ್ಟ್)	1	1	2	3
ಬಿ.ಬಿ.ಸಿ.	—	—	1	1
ಕಾಂಗ್ರೆಸ್	127	55	105	20
ಜನತಾ ಪಕ್ಷ	—	—	—	29
ಸಿ.ಪಿ.ಐ.	16	30	13	2
ಎಸ್.ಯು.ಸಿ.ಐ.	4	7	7	4
ಮುಸ್ಲಿಂಲೀಗ್	—	3	7	1
ಸಿ.ಪಿ.ಐ. (ಎಂ.ಎಲ್.)	—	—	—	1

1967ರ ಸಾರ್ವತ್ರಿಕ ಚುನಾವಣೆಯಲ್ಲಿ ಎಡ ಪಕ್ಷಗಳಿಗೆ ಒಂದು ಹೊಂದಾಣಿಕೆಗೆ ಬರಲು ಸಾಧ್ಯವಾಗಲಿಲ್ಲ. ಕಮ್ಯೂನಿಸ್ಟ್ (ಮಾರ್ಕ್ಸಿಸ್ಟ್) ಪಕ್ಷ, ಆರ್.ಎಸ್.ಪಿ., ಎಸ್.ಯು.ಸಿ, ಆರ್. ಸಿ. ಪಿ. ಐ., ವರ್ಕರ್ಸ್ ಪಾರ್ಟಿ, ಮಾರ್ಕ್ಸ್‌ವಾದಿ ಫಾರ್‌ವರ್ಡ್ ಬ್ಲಾಕ್ ಎಂಬೀ 7 ಪಕ್ಷಗಳನ್ನೊಳಗೊಂಡ ಯು. ಎಲ್. ಎಫ್. ಮತ್ತು ಸಿ.ಪಿ.ಐ., ಬಂಗ್ಲಾ ಕಾಂಗ್ರೆಸ್, ಫಾರ್ವರ್ಡ್ ಬ್ಲಾಕ್, ಬೊಲ್ಶವಿಕ್ ಪಾರ್ಟಿ ಎಂಬೀ 4 ಪಕ್ಷಗಳನ್ನೊಳಗೊಂಡ ಪಿ.ಯು. ಎಲ್. ಎಫ್. ಈ ಎರಡು ಎಡ ಪಕ್ಷ ರಂಗಗಳು, ಚುನಾವಣಾ ರಂಗಕ್ಕೆ ಇಳಿದವು. ಈ ಚುನಾವಣೆಯಲ್ಲಿ ಕಾಂಗ್ರೆಸ್ ಪಕ್ಷ ಪ. ಬಂಗಾಳದಲ್ಲಿ ತನ್ನ ಬಹುಮತವನ್ನು ಕಳೆದುಕೊಂಡಿದ್ದು. 260ರಲ್ಲಿ 127 ಸ್ಥಾನಗಳು ಮಾತ್ರ ಅದಕ್ಕೆ ಲಭಿಸಿತು. 153 ಸ್ಥಾನಗಳು ಗಳಿಸಿದ ಎರಡು ಎಡ ಪಕ್ಷ ರಂಗಗಳು 1967ರ ಮಾರ್ಚ್ 2 ರಂದು ಮಂತ್ರಿ ಮಂಡಳ ರಚಿಸಿದವು. ಅಜಯ ಮುಖರ್ಜಿ ಮುಖ್ಯ ಮಂತ್ರಿಯಾಗಿಯೂ, ಕಾಂ| ಜ್ಯೋತಿ ಬಸುರವರು ಉಪ ಮುಖ್ಯ ಮಂತ್ರಿಯಾಗಿಯೂ ಚುನಾಯಿತರಾದರು. ವಜಾ ಮಾಡಲ್ಪಟ್ಟ ಎಲ್ಲಾ ಸರ್ಕಾರೀ ನೌಕರರನ್ನು ವಾಪಸ್ ತೆಗೆದುಕೊಳ್ಳುವುದೇ ಮಂತ್ರಿ ಮಂಡಲದ ಮೊದಲನೆಯ ತೀರ್ಮಾನವಾಗಿತ್ತು. ಜುಲೈ ತಿಂಗಳಲ್ಲಿ ವಿದೇಶಿ ಕಂಪನಿಯ ಹಿಡಿತದಲ್ಲಿದ್ದ ಕಲ್ಕತ್ತಾ ಟ್ರಾಂ ರಾಷ್ಟ್ರೀಕರಣ ಮಾಡುವ ನಿರ್ಣಯವನ್ನು ಕಾಂ| ಜ್ಯೋತಿ ಬಸುರವರು ವಿಧಾನ ಸಭೆಯಲ್ಲಿ ತಂದರು. ಅಜಯ ಮುಖರ್ಜಿ, ಪ್ರಫುಲ್ಲಘೋಷ್, ಹುಮಾಯೂನ್ ಕಬೀರ್ ಇವರುಗಳು ಸೇರಿ ಸಂಯುಕ್ತ ರಂಗದಲ್ಲೇ ಇದ್ದುಕೊಂಡು ಅದನ್ನು ಒಡೆಯಲು ಪ್ರಯತ್ನಿಸಿದರು. ಮುಖ್ಯ ಮಂತ್ರಿ ಅಜಯ ಮುಖರ್ಜಿ ಇಂಧಿರಾ ಗಾಂಧಿಯೊಡನೆ ಒಳಸಂಚು ನಡೆಸಿದ ಕಾರಣ 1967 ಅಕ್ಟೋಬರ್ 2 ರಂದು ಬಾಂಗ್ಲಾ ಕಾಂಗ್ರೆಸ್ ಸಂಯುಕ್ತ ರಂಗವನ್ನು ಬಿಟ್ಟಿತು. ನವಂಬರ್ 21 ರಂದು ರಾಜ್ಯಪಾಲರು ಅಜಯ ಮುಖರ್ಜಿ ಮಂತ್ರಿ ಮಂಡಲವನ್ನು ವಿಸರ್ಜನೆ ಮಾಡಿದರು. ಡಾ| ಫ್ರಫುಲ್ಲ ಘೋಷರ ನೇತೃತ್ವದಲ್ಲಿ 1967 ನವಂಬರ್ 21 ರಂದು ಹೊಸ ಮಂತ್ರಿ ಮಂಡಳ ಪ್ರಮಾಣವಚನ ಸ್ವೀಕರಿಸಿತು. ನವಂಬರ್ 27 ರಂದು ವಿಧಾನ ಸಭೆಯನ್ನು ಕರೆದರು. ಆದರೆ ಕಾನೂನು ಬಾಹಿರವಾಗಿ ಅಧಿಕಾರಕ್ಕೆ ಬಂದ ಮಂತ್ರಿ ಮಂಡಲವನ್ನು ಸೇರಿಸಲು ಸ್ಪೀಕರ್ ಬಿಜಯ್ ಬ್ಯಾನರ್ಜಿಯವರು ತಯಾರಿಲ್ಲವೆಂದು ಸಾರಿದರು. 1968ರ ಫೆಬ್ರವರಿ 20 ರಂದು ಫ್ರಫುಲ್ಲರ ಮಂತ್ರಿ ಮಂಡಲ ರಾಜಿನಾಮೆ ಕೊಟ್ಟಿತು. ಪ. ಬಂಗಾಳದಲ್ಲಿ ಪ್ರಪ್ರಥಮವಾಗಿ ಅಧ್ಯಕ್ಷರ ಆಳ್ವಿಕೆ ಜಾರಿಗೆ ಬಂತು.

1969 ಫೆಬ್ರವರಿ 1 ರಂದು ನಡೆದ ಮಧ್ಯ ಕಾಲೀನ ಚುನಾವಣೆಯಲ್ಲಿ ಮಾರ್ಕ್ಸ್‌ವಾದಿ ಕಮ್ಯೂನಿಸ್ಟ್ ಪಕ್ಷದ ನಾಯಕ್ವದಲ್ಲಿ 14 ಪಕ್ಷಗಳು ಸೇರಿ 260ರಲ್ಲಿ 218 ಸ್ಥಾನಗಳು ಗಳಿಸಲು ಸಾಧ್ಯವಾಯಿತು. ಸಿ. ಪಿ. ಐ. (ಎಂ) ಮಾತ್ರ 88 ಸ್ಥಾನಗಳನ್ನು ಪಡೆಯಿತು. ಪುನಃ ಅಜಯ ಮುಖರ್ಜಿ ಮುಖ್ಯ ಮಂತ್ರಿಯಾಗಿಯೂ ಕಾಂ| ಜ್ಯೋತಿ ಬಸುರವರು ಉಪ ಮುಖ್ಯಮಂತ್ರಿಯಾಗಿಯೂ ಎರಡನೆ ಸಂಯುಕ್ತರಂಗ 1967 ಫೆಬ್ರವರಿ 25 ರಂದು ಅಧಿಕಾರಕ್ಕೆ ಬಂತು. ಜ್ಯೋತಿಬಸುರವರು ವಹಿಸಿದ್ದ ಗೃಹ ಖಾತೆ ಮತ್ತು ಸಿ. ಪಿ. ಐ. (ಎಂ)ನ ನೇತೃತ್ವದಲ್ಲಿದ್ದ ಮಜೂರ, ಭೂಸುಧಾರಣೆ, ವಿದ್ಯಾಭ್ಯಾಸ ಇಲಾಖೆಗಳ ಬಗ್ಗೆ ಸಂಯುಕ್ತ ರಂಗದಲ್ಲಿ ಗಲಭೆಗಳನ್ನು ಎಬ್ಬಿಸಲು ಅಜಯ ಮುಖರ್ಜಿ ಮತ್ತು ಕಂಪನಿಯವರು ತೊಡಗಿದರು. 1969ರ ಏಪ್ರಿಲ್ ತಿಂಗಳು ರವೀಂದ್ರ ಸರೋವರದಲ್ಲಿ ನಡೆದ ಅಶೋಕ್‌ಕುಮಾರ್ ನೈಟ್‌ನಲ್ಲಿ ನಡೆದ ಘಟನೆ, ಸತ್ತ ಪೋಲೀಸನ ಮೃತ ದೇಹದೊಡನೆ ವಿಧಾನ ಸಭಾ ಪ್ರವೇಶ, ನಕ್ಸಲ್‌ಬಾರಿ, ಕಾಶೀಪುರ ಆಯುಧ ನಿರ್ಮಾಣ ಕೇಂದ್ರಗಳಲ್ಲಿ ನಡೆದ ಬಂದೂಕು ಪ್ರಯೋಗ, ಮುಂತಾದ ವಿಷಯಗಳಿಗಾಗಿ ಬಹಿರಂಗವಾಗಿ ವಿವಾದ ನಡೆಯಿತು. ವಿಧಾನ ಸಭೆಯಲ್ಲಿ ಕಂದಾಯ ಸಚಿವರಾಗಿದ್ದ ಹರೇ ಕೃಷ್ಣಕೋನಾರ್ ಮತ್ತು ಮುಖ್ಯ ಮಂತ್ರಿ ಅಜಯ ಮುಖರ್ಜಿಯರ ಮಧ್ಯೆ ವಾದ ವಿವಾದವೇ ನಡೆಯಿತು.

1970 ಮಾರ್ಚ್ 7, 8 ರಂದು 14 ಘಂಟೆಗಳ ಚರ್ಚೆಯನಂತರ ಬಂಗ್ಲಾ ಕಾಂಗ್ರೆಸ್ ಮಾರ್ಕ್ಸ್‌ವಾದೀ ಕಮ್ಯೂನಿಸ್ಟ್ ಪಕ್ಷದೊಂದಿಗೆ ಯಾವ ಮೈತ್ರಿಯೂ ಇಲ್ಲವೆಂದು ಹೇಳಿಕೆ ಕೊಟ್ಟಿತು. 1970ರ ಮಾರ್ಚ್ 16 ರಂದು ಅಜಯ ಮುಖರ್ಜಿ ರಾಜೀನಾಮೆ ಕೊಟ್ಟರು. ಮಾರ್ಚ್ 19 ರಂದು ಪ. ಬಂಗಾಳದಲ್ಲಿ ಎರಡನೆ ಸಲ ಅಧ್ಯಕ್ಷರ ಆಳ್ವಿಕೆಗೆ ಒಳಗಾಯಿತು.

1971ರ ಮಾರ್ಚ್ ತಿಂಗಳ ಚುನಾವಣೆಯಲ್ಲಿ ಬಾರಾನಗರ್ ಕ್ಷೇತ್ರದಲ್ಲಿ ಕಾಂ। ಜ್ಯೋತಿ ಬಸುರವರಿಗೆ ವಿರುದ್ಧವಾಗಿ ಅಜಯ ಮುಖರ್ಜಿ ಸ್ಪರ್ಧಿಸಿ ಸೋತರು. 115 ಸ್ಥಾನಗಳು ಗಳಿಸಿ ಸಿ.ಪಿ.ಐ. (ಎಂ) ಅತಿ ದೊಡ್ಡ ಪಾರ್ಟಿಯಾಗಿ ಬೆಳೆಯಿತು. ಸಿ.ಪಿ.ಐ.(ಎಂ)ನ ನಾಯಕತ್ವದಲ್ಲಿನ 6 ಪಕ್ಷಗಳ ರಂಗಕ್ಕೆ 123 ಸ್ಥಾನಗಳು, ಎಂಟು ಎಡ ಪಕ್ಷ ಪಾರ್ಟಿಗಳ ರಂಗಕ್ಕೆ 25 ಸ್ಥಾನಗಳು, ಆರ್. ಎಸ್. ಪಿ.ಗೆ 3 ಸ್ಥಾನಗಳು ಲಭಿಸಿತು. ಸಿ.ಪಿ.ಐ. ಹಾಗೂ ಫಾರ್‌ವಾರ್ಡ್ ಬ್ಲಾಕ್ ಐಕ್ಯಕ್ಕೆ ತಯಾರಿಲ್ಲದ ಕಾರಣ ಎರಡು ರಂಗಗಳು ಸೇರಿ ಮಂತ್ರಿ ಮಂಡಲ ರಚಿಸುವುದಕ್ಕಾಗಲಿಲ್ಲ. 1971 ಏಪ್ರಿಲ್ 1 ರಂದು ಕಾಂಗ್ರೆಸ್, ಸಿ.ಪಿ.ಐ ನ ಬೆಂಬಲದ ಕಾರಣ ಸರ್ಕಾರ ರಚಿಸಿತು.

1971 ಜೂನ್ 24 ರಂದು ಕಲ್ಕತ್ತ ನಗರದಲ್ಲಿ ಯುವ ಕಾಂಗ್ರೆಸ್ ನಾಯಕ ನಾರಾಯಣ್‌ಕರ್ ಕೊಲೆ ಮಾಡಲ್ಪಟ್ಟಾಗ ಅಜಯ ಮಂತ್ರಿ ಮಂಡಲ ರಾಜಿನಾಮೆಕೊಡಬೇಕೆಂದು ಯುವ ಕಾಂಗ್ರೆಸ್ ಒತ್ತಾಯ ಮಾಡಿತು. ಮುಖ್ಯ ಮಂತ್ರಿಯ ಸಲಹೆಯ ಪ್ರಕಾರ ಜೂನ್ 25 ರಂದು ಗವರ್ನರ್ ವಿಧಾನ ಸಭೆ ವಿಸರ್ಜನೆ ಮಾಡಿದರು.

1971ರ ನವಂಬರ್ ತಿಂಗಳಲ್ಲಿ ನಡೆದ ನಗರ ಸಭಾ ಚುನಾವಣೆಯಲ್ಲೇ ಕಾಂಗ್ರೆಸ್ ಪಕ್ಷ ರಿಗ್ಗಿಂಗ್, ಗೂಂಡಾಗಿರಿ ಮತ್ತು ಅರೆ ಫ್ಯಾಸಿಸ್ಟ್ ದಬ್ಬಾಳಿಕೆಯನ್ನು ಪ್ರಯೋಗಿಸಿ ಜಯಗಳಿಸಿತು.

1972ರ ಮಾರ್ಚ್ 10 ರಂದು ನಡೆದ ಚುನಾವಣೆಯಲ್ಲಿ ಕಾಂಗ್ರೆಸ್ ಪಕ್ಷ ತನ್ನ ಗೂಂಡಾಗಿರಿಯನ್ನು ಕಾರ್ಯಾಚರಣೆಯಲ್ಲಿ ತಂದಿತು. ಮತದಾನ ನಡೆಯುವ ಕ್ಷೇತ್ರಗಳಲ್ಲಿ ಗೂಂಡಾಗಳು ಲೂಟಿ ಮಾಡುವುದು, ಆಯುಧ ಧರಿಸಿ ಕಾಂಗ್ರೆಸ್ ಪುಡಾರಿಗಳು ಬೆಳಿಗ್ಗೆ 9 ಘಂಟೆಗಳೊಳಗೆ ಎಲ್ಲಾ ಕ್ಷೇತ್ರಗಳಲ್ಲೂ ಮತ ನಡೆದುದಾಗಿ ಹೇಳಿ ಭಾರೀ ಪ್ರಮಾಣದಲ್ಲಿ ಅವ್ಯವಹಾರ ನಡೆಸಿದರು. ನಂತರ ಅಧಿಕಾರಕ್ಕೆ ಬಂದ ಸಿದ್ಧಾರ್ಥ ಶಂಕರ್ ರಾಯ್ ಮಾರ್ಕ್ಸ್‌ವಾದೀ ಕಮ್ಯೂನಿಸ್ಟರ, ಕಾರ್ಮಿಕ ನಾಯಕರ ಮೇಲೆ ಅತಿ ಕ್ರೂರವಾದ ದಬ್ಬಾಳಿಕೆಯನ್ನೇ ನಡೆಸಿದರು. ಸಹಸ್ರಾರು ಮಾರ್ಕ್ಸ್‌ವಾದಿ ಕಮ್ಯೂನಿಸ್ಟ್ ಕಾರ್ಯಕರ್ತರನ್ನು ಕೊಲೆ ಮಾಡಿದರು. ಕಾರ್ಮಿಕ ಸಂಘಗಳನ್ನು ನಾಶ ಮಾಡಿದರು. ಅನೇಕ ಕಾರ್ಯಕರ್ತರು ರಾಜ್ಯವನ್ನೇ ಬಿಟ್ಟು ಹೋಗಬೇಕಾಯಿತು. ಈ ಅರೆ ಫ್ಯಾಸಿಸ್ಟ್ ದಬ್ಬಾಳಿಕೆ ತುರ್ತು ಪರಿಸ್ಥಿತಿಯ ಅಂತ್ಯದವರೆಗೂ ಮುಂದುವರಿಯಿತು.

ಇಂದಿರಾ ಪರಾಭವಗೊಂಡನಂತರ 1977ರ ಜೂನ್ ತಿಂಗಳಲ್ಲಿ ಪ. ಬಂಗಾಳ ವಿಧಾನ ಸಭೆಗೆ ಚುನಾವಣೆ ನಡೆಯಿತು. 294 ಸ್ಥಾನಗಳಿರುವ ವಿಧಾನ ಸಭೆಯಲ್ಲಿ 230 ಸ್ಥಾನಗಳನ್ನು ಗಳಿಸಿ ಕಾಂ| ಜ್ಯೋತಿ ಬಸುರವರ ನೇತೃತ್ವದಲ್ಲಿನ ಮಂತ್ರಿಮಂಡಲ 1977 ಜೂನ್ 24 ರಂದು ಅಧಿಕಾರಕ್ಕೆ ಬಂತು. ಜನತೆಗೆ ಕೊಟ್ಟ ಭರವಸೆಯಂತೆ ಅನೇಕ ಸುಧಾರಣೆಗಳು ಕಳೆದ 5 ವರ್ಷಗಳ ಕಾಲ ಸರ್ಕಾರ ಜಾರಿ ಮಾಡಿದೆ. ಭೂಸುಧಾರಣೆ, ಜಿಲ್ಲಾ ಮಟ್ಟ ಮತ್ತು ಕೆಳಮಟ್ಟದ ಅಧಿಕಾರವನ್ನು ವಿಕೇಂದ್ರಿಸುವುದರ ಮೊದಲ ಹೆಜ್ಜೆಯಾಗಿ ಪಂಚಾಯಿತಿಗಳಿಗೆ ನಡೆಸಿದ ಚುನಾವಣೆ, ನಿರುದ್ಯೋಗ ವೇತನ, ವಿದ್ಯಾಭ್ಯಾಸ ರಂಗದಲ್ಲಿ ಮಾಡಿದ ಬದಲಾವಣೆ, ಹರಿಜನ ಗಿರಿಜನರ ಕಲ್ಯಾಣಕ್ಕಾಗಿ ಮಾಡಿದ ಸುಧಾರಣೆಗಳು, ಕಾರ್ಮಿಕರ ಕ್ಷೇಮಕ್ಕಾಗಿ ಮಾಡಿದ ಮಸೂದೆಗಳು ಇಡೀ ಭಾರತ ದೇಶದ ಜನತೆಯನ್ನು, ವಿಶೇಷವಾಗಿ ಶ್ರಮಿಕ ವರ್ಗವನ್ನು ಆಕರ್ಷಿಸಿದವು.

ಕೇಂದ್ರದ ಇಂದಿರಾ ಗಾಂಧಿ ಸರ್ಕಾರ ಹೇಗಾದರೂ ಮಾಡಿ ಈ ಎಡರಂಗ ಸರ್ಕಾರವನ್ನು ಉರುಳಿಸಿ ಅಧ್ಯಕ್ಷರ ಆಳ್ವಿಕೆಯನ್ನು ತರಲು ಅನೇಕ ಒಳಸಂಚುಗಳನ್ನು ಮಾಡಿತು. ಆದರೆ ಹಿಂದೆ ನಡೆಸಿದ ಹಾಗೆ ದಬ್ಬಾಳಿಕೆ, ಗೂಂಡಾಗಿರಿ ನಡೆಸಲು ಇಂದಿರಾಗಾಂಧಿ ಹಿಂಜರಿಯುತ್ತಿದ್ದಾರೆ. ಹೀಗಾಗಿ ಪ. ಬಂಗಾಳ ಕಾಂ| ಜ್ಯೋತಿಬಸುರವರ ನಾಯಕತ್ವದಲ್ಲಿನ ಎಡರಂಗ ಸರ್ಕಾರ 5 ವರ್ಷ ಪೂರ್ತಿ ಮಾಡಲಿದೆ. ಭಾರತದ

(5ನೇ ಪುಟ ನೋಡಿ)

ಪ್ರಧಾನಿಯವರಿಗೆ ಕೆಲವು ಪ್ರಶ್ನೆಗಳು

—ಜಿ ವಿ. ಶ್ರೀರಾಂರೆಡ್ಡಿ

ಮೇ 19 ರಂದು 4 ರಾಜ್ಯಗಳ ವಿಧಾನ ಸಭೆಗಳಿಗೆ ಹಾಗೂ ಕೆಲವು ಲೋಕಸಭಾ ಕ್ಷೇತ್ರಗಳಿಗೆ ನಡೆಯಲಿರುವ ಚುನಾವಣೆಯ ನಿಮಿತ್ತ ಪ್ರಧಾನಿ ಶ್ರೀಮತಿ ಗಾಂಧಿ ನಾನಾ ಕಡೆ ಮತದಾರರನ್ನುದ್ದೇಶಿಸಿ ಭಾಷಣ ಮಾಡಿರುವ ವರದಿ ಪತ್ರಿಕೆಗಳಲ್ಲಿ ವರದಿಯಾಗಿವೆ. ಪ್ರಧಾನಿ ಇಂದಿರಾ ಗಾಂಧೀ ಅಪ್ಪಿತಪ್ಪಿ ಕೂಡ ನಿಜ ಹೇಳುವುದಿಲ್ಲಾ ಎಂಬುದು ಅನೇಕ ಸಾರಿ ಸಾಬೀತಾಗಿದ್ದರೂ, ಇಷ್ಟು ಕೀಳು ಮಟ್ಟದಲ್ಲಿ ಅವರು ಮಾತಾಡುತ್ತಾರೆಂದು ಊಹಿಸುವುದೂ ಕೂಡ ಕಷ್ಟ.

ಮೇ 5 ರಂದು ಕೇರಳದ ಕಾಸರಗೋಡು ಜಿಲ್ಲೆಯಲ್ಲಿ ಚುನಾವಣಾ ಪ್ರಚಾರವನ್ನು ಆರಂಭಿಸುತ್ತಾ, ಮಾರ್ಕ್ಸ್‌ವಾದಿಗಳಿಗೆ ತತ್ವವೂ ಇಲ್ಲ; ನೆಲೆಯೂ ಇಲ್ಲ ಎಂದಿದ್ದಾರೆ. ಮೇ 7 ರಂದು ಕಲಕತ್ತಾದಲ್ಲಿ ನಡೆದ ಪತ್ರಿಕಾಗೋಷ್ಠಿಯೊಂದನ್ನು ಉದ್ದೇಶಿಸಿ ಮಾತನಾಡುತ್ತಾ, "ಮಾರ್ಕ್ಸ್‌ವಾದಿ ಪಕ್ಷದ ನೇತೃತ್ವದ ಸರಕಾರಕ್ಕೆ ಕೇಂದ್ರ ಸರಕಾರವನ್ನು ಉರುಳಿಸುವುದೊಂದೇ ಉದ್ದೇಶ" ಎಂದಿದ್ದಾರೆ. ಅವರು ಮುಂದುವರೆದು, "ಮಾರ್ಕ್ಸ್‌ವಾದಿಗಳ ನೇತೃತ್ವದಲ್ಲಿರುವ ರಾಜ್ಯಗಳಲ್ಲಿ ನಡೆಸಿರುವಷ್ಟು ಹಿಂಸಾಚಾರಗಳು ಸ್ವತಂತ್ರ ಭಾರತದಲ್ಲಿ ಇದುವರೆಗೂ ಎಲ್ಲಿಯೂ ನಡೆದಿಲ್ಲ" ಎಂದರು.

ಮೇ 9 ರಂದು ಒಂದೆಡೆ ಮಾತನಾಡುತ್ತಾ, "ಲೋಕದಳ ಮತ್ತು ಬಿ.ಜೆ.ಪಿ.ಗಳು ಮಾಡಿಕೊಂಡ ಮೈತ್ರಿಯು ಅವಕಾಶವಾದಿ" ಎಂದು ದೂರಿದ್ದಾರೆ. ಇವು ತತ್ವ ಮತ್ತು ನೆಲೆ ಇರುವ ಪಕ್ಷದ ಅಧ್ಯಕ್ಷೆ ಮತ್ತು ಪ್ರಧಾನಿಯಾಗಿರುವ ವ್ಯಕ್ತಿಯ ಅಣಿಮುತ್ತುಗಳು.

ಇಂದಿರಾ ಗಾಂಧಿಯವರಿಗೆ ಯಾವ ತತ್ವವಿದೆ ಅಥವಾ ಎಲ್ಲಿ ನೆಲೆ ಇದೆ ಎಂಬುದರ ಮಾಹಿತಿ ಅವರೇ ಕೊಡಬೇಕಿದೆ. ರಾಜಕೀಯ ತಿಳುವಳಿಕೆ ಇರುವ ಯಾರಿಗಾದರೂ ಮಾರ್ಕ್ಸ್‌ವಾದಿ ಕಮ್ಯೂನಿಸ್ಟ್ ಪಕ್ಷಕ್ಕೊಂದು ತತ್ವವಿದೆಯೋ ಇಲ್ಲವೋ ಎಂಬುದು ಗೊತ್ತು. ಅದು ತತ್ವಕ್ಕೆ ಬದ್ಧವಾಗಿ ಇರದೇ ಹೋಗಿದ್ದರೆ ಇಂದು ಕೇರಳದಲ್ಲಿ ಚುನಾವಣೆ ನಡೆಯುವ ಅವಶ್ಯಕತೆ ಇರಲಿಲ್ಲ. ಸಭಾಪತಿಯವರ ಓಟಿನ ಆಧಾರದ ಮೇಲೆ 3 ತಿಂಗಳು ಅಧಿಕಾರ ನಡೆಸಿದ್ದು ಯಾರು ? ಇದು ಒಂದು ತತ್ವವೇ ? ಹಿಮಾಚಲ ಪ್ರದೇಶದಲ್ಲಿ ಹೋಗಿ ಬಿ.ಜೆ.ಪಿ.ಯನ್ನು ಕೋಮುವಾದಿ ಪಕ್ಷವೆಂದು ದೂರಿದ ಪ್ರಧಾನಿಯವರು ಬಿ.ಜೆ.ಪಿ.ಯವರನ್ನು ಸೇರಿಕೊಂಡು ಕೇರಳದಲ್ಲಿ ಮಾರ್ಕ್ಸ್‌ವಾದಿಗಳನ್ನು ವಿರೋಧಿಸಿದ್ದು ಯಾವ ತತ್ವ ? ಇಂದಿನ ಎಲ್ಲಾ ಅನಿಷ್ಟಗಳಿಗೂ ಅಂದಿನ ಜನತಾ ಸರಕಾರವೇ ಹೊಣೆ ಎಂದು ಬೊಬ್ಬಿಡುವ ಇಂದಿರಾ ಗಾಂಧೀ ಪಶ್ಚಿಮ ಬಂಗಾಲದಲ್ಲಿ ಜನತಾದೊಂದಿಗೆ ಹೊಂದಾಣಿಕೆ ಮಾಡಿಕೊಂಡಿದ್ದು ಯಾವ ತತ್ವ ? ಹಿಮಾಚಲ ಪ್ರದೇಶ ಮತ್ತು ಹರಿಯಾಣಾದಲ್ಲಿ ಪಕ್ಷಾಂತರಿಗಳನ್ನು ಸೇರಿಸಿಕೊಂಡು ಸರಕಾರ ರಚಿಸಿದ್ದು ಯಾವ ತತ್ವದ ಆಧಾರದ ಮೇಲೆ ? ಇಡೀ ರಾಜಕೀಯ ಜೀವನದಲ್ಲಿ ಎಂದಾದರೂ ಯಾವುದೋ ಒಂದು ತತ್ವಕ್ಕೆ ಅಂಟಿಕೊಂಡಿದ್ದುಂಟೋ ? ಅವರಿಗಿರುವ ಒಂದೇ ಒಂದು ತತ್ವವೆಂದರೆ ಶತಾಯುಗತಾಯು ಅಧಿಕಾರಕ್ಕಂಟಿಕೊಳ್ಳುವದೊಂದೇ. ಇದಕ್ಕಾಗಿ ಅವರು ಯಾವುದಕ್ಕೂ ಹೇಸುವದಿಲ್ಲ.

ಇನ್ನು ನೆಲೆಯ ವಿಷಯಕ್ಕೆ ಬಂದರೆ — ಇಂದಿರಾ ಗಾಂಧಿಯವರಿಗೆ ನಿಜವಾಗಿ ಭದ್ರ ನೆಲೆ ಇದ್ದರೆ ಅವರೇಕೆ ಪ. ಬಂಗಾಲದಲ್ಲಿ ಚುನಾವಣೆ ನಡೆಯಬಾರದೆಂದು ನಾನಾ ಕುತಂತ್ರಗಳನ್ನು ಅನುಸರಿಸಿದ್ದು ? ಈಗಲೂ ಅನುಸರಿಸುತ್ತಿರುವುದು ? ಭದ್ರ ನೆಲೆ ಇರುವವರು ಕೇರಳದಲ್ಲಿ ಏಕೀಷ್ಟು ಅವಸ್ಥೆ ಪಡುತ್ತಿರುವರೋ ತಿಳಿಯದು.

ಇಂದಿರಾ ಪಕ್ಷದ ಟಿಕೇಟಿನ ಮೇಲೆ ಆಯ್ಕೆಯಾಗಿದ್ದ ಶ್ರೀ ಬಹುಗುಣ ಅವರು ಪಕ್ಷಕ್ಕೆ ರಾಜೀನಾಮೆಕೊಟ್ಟಾಗ ಲೋಕಸಭಾ ಸದಸ್ಯತ್ವಕ್ಕೂ ರಾಜೀನಾಮೆ ಕೊಟ್ಟಿದ್ದರು. ಸುಭದ್ರ ಸರಕಾರದ ನೇತಾರೆ ಇಂದಿರಾರು ಗಡವಾಲ್ ಕ್ಷೇತ್ರಕ್ಕೆ ಚುನಾವಣೆ ನಡೆಸಲು ಇಷ್ಟು ದಿನ ತೆಗೆದುಕೊಂಡಿದ್ದೇಕೆ ? ಎರಡು ಸಲ ಚುನಾವಣೆ ನಡೆಸುವುದನ್ನು ರದ್ದು ಮಾಡಿದ್ದೇಕೆ ? ಒಂದು ಕ್ಷೇತ್ರದ ಚುನಾವಣೆಗೆ ಹೆದರಿದ್ದಾರಾ ? ಒಂದು ದೇಶದ ಪ್ರಧಾನಿಯಾಗಿದ್ದು, ಅದರಲ್ಲೂ ಒಂದು ರಾಜಕೀಯ ಪಕ್ಷದ ಅಧ್ಯಕ್ಷೆಯಾಗಿದ್ದುಕೊಂಡು, ಇನ್ನೊಂದು ರಾಜಕೀಯ ಪಕ್ಷಕ್ಕೆ ನೆಲೆ ಇಲ್ಲ; ಕಾರಣ ಮತ ಕೊಡಬೇಡಿ ಎಂದು ಹೇಳುವುದು ಪ್ರಜಾಪ್ರಭುತ್ವಕ್ಕೆ ಭೂಷಣವೇ ? ಪ್ರಜಾಪ್ರಭುತ್ವದಲ್ಲಿ ನೆಲೆ ಇದ್ದವರು, ಇಲ್ಲದವರೂ ಚುನಾವಣೆಯಲ್ಲಿ ಸ್ಪರ್ಧಿಸಲು ಹಕ್ಕು ಇದೆ. ತನ್ನ ಪದವಿಯ ಘನತೆಗೆ ತಕ್ಕ ಹಾಗೆ ನಡೆದುಕೊಳ್ಳದ ವ್ಯಕ್ತಿ ಈ ದೇಶದ ಪ್ರಧಾನಿ ಆಗಿರುವುದೇ ನಾಚಿಗ್ಗೇಡಿನ ಸಂಗತಿ.

ಮಾರ್ಕ್ಸ್‌ವಾದಿಗಳ ಆಡಳಿತದಲ್ಲಿ ನಡೆದಷ್ಟು ಹಿಂಸಾಚಾರ ಮತ್ತು ಕಾನೂನಿನ ಅವ್ಯವಸ್ಥೆ ಸ್ವತಂತ್ರ ಭಾರತದಲ್ಲಿ ಎಲ್ಲೂ ನಡೆದಿಲ್ಲ ಎಂದಿದ್ದಾರೆ ಪ್ರಧಾನಿ ಇಂದಿರಾ ಗಾಂಧಿ. ಇದು ಎಷ್ಟು ಸುಳ್ಳು ಮತ್ತು ಎಷ್ಟು ವಂಚನೆಯ ಹೇಳಿಕೆ ಎಂಬುದು ಜನತೆಗೆ ಚೆನ್ನಾಗಿ ಗೊತ್ತಿದೆ. ಕರ್ನಾಟಕದ ಮೂಲೆ ಮೂಲೆಯಲ್ಲಿ ಪ್ರತಿ ಊರಿನ ಗೋಡೆಯ ಮೇಲೆ 'ಇಂದಿರಾ ಮಾರಿ ದಲಿತರನ್ನು ಎಷ್ಟು ಸಾರಿ ಕೊಲೆ ಮಾಡಿಸುವುದು', 'ಇಂದಿರಾ ರಾಜ್ಯದಲ್ಲಿ ಏನೇನ ಕಂಡ—ದಲಿತರನ್ನು ಜೀವಂತ ಸುಡುವುದು ಕಂಡೆ' ಎಂಬ ಗೋಡೆ ಬರಹಗಳು ಇಂದಿರಾ ಪಕ್ಷದ ಆಡಳಿತಕ್ಕೆ ಕೈಗನ್ನಡಿಯಾಗಿವೆ. ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ನೇತೃತ್ವದ ರಾಜ್ಯ ಸರ್ಕಾರಗಳಲ್ಲಿ ಮತ್ತು ಇಂದಿರಾ ಪಕ್ಷದ ನೇತೃತ್ವದ ರಾಜ್ಯಗಳಲ್ಲಿ ಕಾನೂನು ಪರಿಸ್ಥಿತಿಯನ್ನು ಅವಲೋಕಿಸಿದರೆ ಸತ್ಯ ಏನೆಂಬುದು ಎಲ್ಲರಿಗೂ ನಿಚ್ಚಳವಾಗುವುದು ಎಲ್ಲಿ ಕಾನೂನು ಪರಿಸ್ಥಿತಿ ಹದಗೆಟ್ಟಿದೆ ಎಂಬುದು. ಇಂದಿರಾ ಅವರಿಗೆ ಧೈರ್ಯವಿದ್ದರೆ ಈ ಕುರಿತಾದ ಅಂಕಿ ಅಂಶಗಳನ್ನು ಅವರು ಪ್ರಕಟಿಸಲಿ. ಸ್ವತಂತ್ರ ಭಾರತದಲ್ಲಿ ಚರಿತ್ರೆಯಲ್ಲೇ ನಡೆಯದಿರುವಷ್ಟು ಕೊಲೆ - ಸುಲಿಗೆಗಳು, ದರೋಡೆ, ದಲಿತರ ಮೇಲೆ ಹತ್ಯಾಕಾಂಡ ನಡೆದಿರುವುದು ಇಂದಿರಾ ಅವರ ತವರು ರಾಜ್ಯವಾದ ಉತ್ತರ ಪ್ರದೇಶದಲ್ಲಿ ಮತ್ತು ಪಕ್ಕದ ಬಿಹಾರಿನಲ್ಲಿ. ಇವೆರಡೂ ರಾಜ್ಯಗಳಲ್ಲಿ ಅಧಿಕಾರಕ್ಕಿರುವುದು ಅವರ ಪಕ್ಷಗಳೇ. ದೇವ್ಲೋಲಿ, ಸಾಧುಪುರ, ಪಿಪ್ರಾ, ಕೆಸಹಾರಾಗಳಲ್ಲಿ ನಡೆದ ದಲಿತರ ಸಾಮೂಹಿಕ ಕೊಲೆಗಳು ಮಾರ್ಕ್ಸ್‌ವಾದಿ ಪಕ್ಷದ ನೇತೃತ್ವವಿರುವ ರಾಜ್ಯಗಳಲ್ಲಿ ನಡೆಯಿತಾ ? ಅವರ ಮೂಗಿನ ನೇರದಲ್ಲಿ(ದೆಹಲಿಯಲ್ಲಿ)ಪ್ರತಿನಿತ್ಯ ಎಷ್ಟು ಮಹಿಳೆಯರ ಮಾನಭಂಗ ನಡೆಯುತ್ತಿದೆ ? ಕಳೆದ ಎರಡು ತಿಂಗಳಲ್ಲಿ 3 ಬ್ಯಾಂಕುಗಳು ಮತ್ತು 2 ಪೋಸ್ಟ್ ಆಫೀಸುಗಳು ದರೋಡೆಗೆ ಒಳಗಾದವು. ಈ ಘಟನೆ ನಡೆದದ್ದು ದೆಹಲಿಯಲ್ಲೋ ? ಕಲ್ಕತ್ತದಲ್ಲೋ ? ಕಲ್ಕತ್ತದಲ್ಲಿ ಎಂದು ಬೇಕಾದರೆ ಇಂದಿರಾ ಹೇಳಿಯಾರು. ತನ್ನ ಸ್ವಂತ ಸೊಸೆ ಮತ್ತು ಮೊಮ್ಮಗನಿಗೆ ವಾಸಿಸಲು ಮನೆಕೊಡಕೂಡದೆಂದು ಆಜ್ಞಾಪಿಸುವಷ್ಟು ಕೀಳ ಮಟ್ಟಕ್ಕೆ ಈ ವ್ಯಕ್ತಿ ಇಳಿದಿದ್ದಾರೆ.

ನೆಲೆ, ತತ್ವ ಮತ್ತು ಕಾನೂನು ವ್ಯವಸ್ಥೆಯ ಕುರಿತು ಬಹಳಷ್ಟು ಮಾತನಾಡುವ ಇಂದಿರಾ ಗಾಂಧಿಯವರಿಗೆ ತಮ್ಮ ಪಕ್ಷದಲ್ಲಿ ತಮಗೇ ನೆಲೆ ಇಲ್ಲದ ಪರಿಸ್ಥಿತಿ ಉಂಟಾಗುತ್ತಿರುವುದರ ಅರಿವುಂಟೇ ? ತಮ್ಮ ಪಕ್ಷಕ್ಕೆ ಒಂದು ಧೋರಣೆ, ಅಂಗೀಕರಿಸಿದ ಒಂದು ಕಾರ್ಯಕ್ರಮ, ಆದರ್ಶ ಉಂಟೇ ಎಂದು ಅವರೇ ಯೋಚಿಸಿಕೊಳ್ಳಬೇಕು. ಈ ಯೋಚಿಸುವ ವಿವೇಚನೆಯೂ ಈ ವ್ಯಕ್ತಿಗೆ ಇಲ್ಲ. ಅವರ ಮತ್ತು ಅವರ ಮಗನ ವಿರುದ್ಧ ಅವರ ಪಕ್ಷದಲ್ಲೇ ಬಹಿರಂಗವಾಗಿ ದಂಗೆ ಎದ್ದಿದೆ. ತನ್ನ ಪಕ್ಷದ ಒಳ ಜಗಳವನ್ನು ನಿಭಾಯಿಸದ ವ್ಯಕ್ತಿಯಿಂದ ದೇಶದ ಸಮಸ್ಯೆಗಳಿಗೆ ಪರಿಹಾರ ಸಿಕ್ಕೀತು ಎಂದು ಊಹಿಸುವುದೂ ಮೂರ್ಖತನವಾದೀತು.

ಸುಭದ್ರ ಸರ್ಕಾರದ ಹೆಸರಿನಲ್ಲಿ ಅಧಿಕಾರಕ್ಕೆ ಬಂದ ಇವರು ಅಧಿಕಾರಕ್ಕೆ ಮರಳಿ ಬಂದು ಎರಡು ವರ್ಷಗಳಾದರೂ ಅಸ್ಸಾಂ ಸಮಸ್ಯೆಗೆ ಪರಿಹಾರ ದೊರೆತಿಲ್ಲ. ತಮ್ಮ ಪಕ್ಷ ಅಧಿಕಾರದಲ್ಲಿರುವ ಪಂಜಾಬಿನಲ್ಲಿ ದಲ್ ಖಾಲ್ಸಾ ಎಂಬ ವಿಚ್ಛಿದ್ರಕಾರಿ ಗುಂಪಿನ ಹಿಂಸಾಚಾರ ತಡೆಯಲಾಗುತ್ತಿಲ್ಲ. ಕಳೆದ ಆರು ತಿಂಗಳಲ್ಲಿ ಪಂಜಾಬ್ ಮತ್ತು ಗುಜರಾತ್‌ಗಳಲ್ಲಿ ಎಷ್ಟು ಸಾರಿ ಕರ್ಫ್ಯೂ ವಿಧಿಸಲಾಗಿತ್ತು ? ಬಿಹಾರ್‌ಷರೀಫ್‌ನಲ್ಲಿ ನಡೆದ ಗಲಭೆಗಳಲ್ಲಿ ಸತ್ತ ಜನ ಎಷ್ಟು ? ಅಲೀಗಡ್ ವಿಶ್ವವಿದ್ಯಾಲಯದ ಗಲಭೆಗಳ ಹಿಂದಿರುವ ಕೈವಾಡ ಯಾರದು ? ಮಹಾರಾಷ್ಟ್ರದಲ್ಲಿ ಟ್ರಸ್ಟ್‌ಗಳ ಹೆಸರಿನಲ್ಲಿ ಕೋಟ್ಯಾಂತರ ರೂ. ಕಬಳಿಸಿದ್ದು ಯಾರು ? ಕರ್ನಾಟಕದ ಸಿಮೆಂಟ್ ಹಗರಣಕ್ಕೆ ಉತ್ತರವೇನು ? ಬಿಹಾರದ ಮುಖ್ಯ ಮಂತ್ರಿ ಜಗನ್ನಾಥ ಮಿಶ್ರಾರ ಮೇಲೆ ಅವರ ಪಕ್ಷದವರೇ ಭ್ರಷ್ಟಾಚಾರದ ಆರೋಪ ಮಾಡಿದ್ದರೂ ಯಾಕೆ ಕ್ರಮ ತೆಗೆದುಕೊಂಡಿಲ್ಲ ? ಅವರ ಪಕ್ಷದ ಮುಖ್ಯ ಮಂತ್ರಿಗಳನ್ನು ಮೇಲಿಂದ ಮೇಲೆ ಬದಲಾಯಿಸುತ್ತಿರುವುದು ಯಾಕೆ ! ಇದು ಸುಭದ್ರ ಸರ್ಕಾರ ನಡೆಸುವ ರೀತಿಯೋ ?

ಪ್ರಧಾನಿ ಇಂದಿರಾ ಗಾಂಧೀಯವರು ಇನ್ನೊಂದು ಗಂಭೀರ ಆರೋಪವನ್ನು ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಮೇಲೆ ಮಾಡಿದ್ದಾರೆ. 'ಮಾರ್ಕ್ಸ್‌ವಾದಿಗಳು ಪ್ರಜಾಪ್ರಭುತ್ವವನ್ನು ದಮನ ಮಾಡುತ್ತಾರೆ ಮತ್ತು ಪ್ರಜಾಪ್ರಭುತ್ವ ಅವರ ಜಾಯಮಾನಕ್ಕೆ ಒಗ್ಗುವದಿಲ್ಲ'ವೆಂಬುದೇ ಈ ಆರೋಪ. 1966-67ರಲ್ಲಿ ಇವರು ಅಧಿಕಾರಕ್ಕೆ ಬಂದ ನಂತರ ಸತತವಾಗಿ ಪ್ರಜಾಪ್ರಭುತ್ವದ ಕತ್ತು ಹಿಸುಕುವ ಪ್ರಯತ್ನವನ್ನು ಇಂದಿರಾ ಮಾಡುತ್ತಲೇ ಬಂದಿದ್ದಾರೆಂಬುದಕ್ಕೆ ನೂರಾರು ನಿದರ್ಶನಗಳುಂಟು. ತನ್ನ ಪಕ್ಷದಲ್ಲಿನ ಆಂತರಿಕ ಪ್ರಜಾಪ್ರಭುತ್ವವನ್ನೇ ಈಕೆ ಸಮಾಧಿ ಮಾಡಿದ್ದುಂಟು. ಅವರು ಅಧಿಕಾರಕ್ಕೆ ಬಂದನಂತರ ಪಕ್ಷದ ಯಾವುದೇ ಹುದ್ದೆಗೂ ಚುನಾವಣೆ ನಡೆದದ್ದಿಲ್ಲ. ಅಥವಾ ಯಾವುದೇ ಒಂದು ರಾಜ್ಯಕ್ಕೂ ಮುಖ್ಯ ಮಂತ್ರಿಯ ಆಯ್ಕೆಯ ಪ್ರಶ್ನೆಯನ್ನು ಆ ರಾಜ್ಯದ ಶಾಸಕರಿಗೆ ಬಿಟ್ಟಿದ್ದಿಲ್ಲ.

ಸ್ವಾತಂತ್ರ್ಯ ಬಂದು 205 ವರ್ಷಗಳು ಆಗಿರುವ ಅಮೇರಿಕಾದಲ್ಲೂ ಸಹ ಮಾಡದಷ್ಟು ಸಂವಿಧಾನ ತಿದ್ದುಪಡಿಗಳನ್ನು ಕೇವಲ 10 ವರ್ಷದ ಅವಧಿಯಲ್ಲಿ ಮಾಡಿ, ಸಂವಿಧಾನದಲ್ಲಿ ಅವಕಾಶವಿರುವ ಎಲ್ಲ ಪ್ರಜಾಪ್ರಭುತ್ವ ಹಕ್ಕುಗಳನ್ನು ದಮನ ಮಾಡಿದ ಇಂದಿರಾ ಗಾಂಧಿಯವರಿಗೆ ಪ್ರಜಾಪ್ರಭುತ್ವದ ಬಗ್ಗೆ ಮಾತನಾಡಲು ನೈತಿಕ ಹಕ್ಕುಂಟೇ ? ಎಸ್ಮಾ, ಎನ್.ಎಸ್.ಎ. ಗಳಂತಹ ಕಾನೂನುಗಳನ್ನು ತಂದವರು ಪ್ರಜಾಪ್ರಭುತ್ವದ ಬಗ್ಗೆ ಮಾತನಾಡುವುದು ವಿಪರ್ಯಾಸ. ನಮ್ಮ ಪ್ರಧಾನಿ ಇಂತಹ ಹೊಣೆಗೇಡಿ, ಬೇಜವಾಬ್ದಾರಿ ಮತ್ತು ಸುಳ್ಳುಗಾತಿಯಾಗಿದ್ದಾರೆ.

ಇಂದಿರಾ ಗಾಂಧಿಯವರ ಎಲ್ಲಾ ಸರ್ವಾಧಿಕಾರಿ ಕ್ರಮಗಳನ್ನು ಪರಿಣಾಮಕಾರಿಯಾಗಿ ಎದುರಿಸಿ ಸಾಕಷ್ಟು ಕಷ್ಟ-ನಷ್ಟ, ಸಾವು-ನೋವುಗಳನ್ನು ಅನುಭವಿಸಿ ಜನತೆಯ ಅಭಿಮಾನವನ್ನು ಸಂಪಾದಿಸಿ ಒಂದು ಸಿದ್ಧಾಂತದ ಆಧಾರದ ಮೇಲೆ ನಿಂತು, ಜನತೆಯ ಸರ್ವತೋಮುಖ ಅಭಿವೃದ್ಧಿಗಾಗಿ ನಿರಂತರ ತ್ಯಾಗ-ಬಲಿದಾನ ಮಾಡುತ್ತಾ ಜನತೆಯ ಮಧ್ಯೆ ಜೀವಂತ ಪಕ್ಷವಾಗಿರುವ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷ ಇಂದಿರಾ ಗಾಂಧಿಯವರಿಂದ ತಾತ್ವಿಕತೆಯ ಬಗ್ಗೆ ಪಾಠ ಹೇಳಿಸಿಕೊಳ್ಳುವ ಅವಶ್ಯವಿಲ್ಲ.

ತನ್ನ ಸರ್ವಾಧಿಕಾರಿ ಕ್ರಮಗಳ ವಿರುದ್ಧ, ಜನದ್ರೋಹಿ ನೀತಿಯ ವಿರುದ್ಧ ಬಲಿಷ್ಠ ಜನಸಂಘಟನೆ ಮಾಡುತ್ತಿರುವುದು ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷ ಎಂಬುದು ಇಂದಿರಾಗೆ ಚೆನ್ನಾಗಿ ಗೊತ್ತಿರುವ ಕಾರಣದಿಂದಲೇ ಅವರು ಸಿ.ಪಿ.ಐ. (ಎಂ) ಮೇಲೆ ಕೆಂಡ ಕಾರುತ್ತಿರುವುದು. ಅವರ ಜನವಿರೋಧಿ ಕ್ರಮಗಳನ್ನು ಅನುಷ್ಠಾನಕ್ಕೆ ತರುವುದು ಸಾಧ್ಯವಿಲ್ಲವೆಂದು ಸಾರಿದ್ದು ಸಿ.ಪಿ.ಐ. (ಎಂ) ನೇತೃತ್ವದ ಸರ್ಕಾರಗಳು. ಅದಕ್ಕೇ ಅವರು ಸಿ.ಪಿ.ಐ. (ಎಂ) ನೇತೃತ್ವದ ಸರ್ಕಾರಗಳು ಕೇಂದ್ರದೊಂದಿಗೆ ಸೆಣಸಾಟಕ್ಕೆ ನಿಂತಿವೆ ಎಂದು ಬೊಬ್ಬೆ ಹಾಕುತ್ತಿರುವುದು. ಈ ಆರೋಪಕ್ಕೆ ಪ. ಬಂಗಾಲದ ಮುಖ್ಯ ಮಂತ್ರಿ ಕಾಂ। ಜ್ಯೋತಿ ಬಸು ತಕ್ಕ ಉತ್ತರ ಈಗಾಗಲೇ ನೀಡಿದ್ದಾರೆ.

ಪ್ರಧಾನಿ ಇಂದಿರಾ ಗಾಂಧಿಯವರು ತನ್ನ ಹೀನ, ಕೊಳಕು ಕೆಲಸಗಳನ್ನು ಮುಚ್ಚಲು ಏನು ಬೇಕಾದರೂ ಮಾತನಾಡಲು, ಏನುಬೇಕಾದರೂ ಮಾಡಲು ಸಿದ್ಧ. ಪ್ರಧಾನಿ ಇಂದಿರಾ ಪಕ್ಷವನ್ನು ಮೇ 19 ರಂದು ನಡೆಯಲಿರುವ ಚುನಾವಣೆಯಲ್ಲಿ ಮಣ್ಣು ಮುಕ್ಕಿಸಿ, ಜನತೆ ಸೂಕ್ತ ಉತ್ತರ ನೀಡಬೇಕಾಗಿದೆ. ಈ ಅವಕಾಶ ಪ. ಬಂಗಾಲ, ಕೇರಳ, ಹರಿಯಾಣಾ ಮತ್ತು ಹಿಮಾಚಲ ಪ್ರದೇಶದ ಮತದಾರರಿಗೆ ಲಭ್ಯವಾಗಿದೆ. ಈ ಅವಕಾಶವನ್ನು ಈ ರಾಜ್ಯಗಳ ಜನತೆ ಸದುಪಯೋಗಪಡಿಸಿಕೊಳ್ಳಬೇಕೆಂದು ನಾವು ಆಶಿಸುತ್ತೇವೆ. ●

(4ನೇ ಪುಟದಿಂದ)

ಇತಿಹಾಸದಲ್ಲೇ ಎಡರಂಗ ಸರ್ಕಾರದ ಈ 5 ವರ್ಷಗಳ ಆಡಳಿತ-ಭಾರತದ ಎಡ ಮತ್ತು ಪ್ರಜಾಪ್ರಭುತ್ವ ಶಕ್ತಿಗಳಿಗೆ ಒಂದು ಆಶಾಕಿರಣವಾಗಿದೆ.

1977ರಲ್ಲಿ ಎಡರಂಗದಲ್ಲಿ 230 ಎಂ.ಎಲ್.ಎ. ಗಳಿದ್ದರು. ಇತ್ತೀಚೆಗೆ ರಂಗದಲ್ಲಿ ಸಿ. ಪಿ. ಐ., ಡೆಮಾಕ್ರಟಿಕ್ ಸೋಷಲಿಸ್ಟ್ ಪಾರ್ಟಿ, ಬಂಗಾಳ ಸೋಷಲಿಸ್ಟ್ ಪಕ್ಷಗಳೂ ಪಾಲುದಾರರಾದರು.

1982ರ ಮೇ 19 ರಂದು ನಡೆಯಲಿರುವ ಚುನಾವಣೆಯಲ್ಲಿ ಕಾಂಗ್ರೆಸ್ ಸರ್ವಾಧಿಕಾರಿ ಶಕ್ತಿಗಳಿಗೂ, ಕೋಮುವಾದಿ ಛಿದ್ರ ಶಕ್ತಿಗಳಿಗೂ ಭಾರಿ ಪೆಟ್ಟನ್ನು ಕೊಟ್ಟು ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ನೇತೃತ್ವದಲ್ಲಿರುವ ಎಡರಂಗ ಅತಿ ಹೆಚ್ಚಿನ ಮತಗಳಿಸಿ ಪುನಃ ಅಧಿಕಾರಕ್ಕೆ ಬರುವುದೆಂಬುದರಲ್ಲಿ ಯಾವ ಸಂಶಯವೂ ಇಲ್ಲ.

—ಎಂ. ರಾಮು

ಕಾಂಗೈ ನಾಯಕತ್ವದ ಜನದ್ರೋಹಿ ರಂಗವನ್ನು ಮಣ್ಣು ಮುಕ್ಕಿಸಿರಿ !

—ಕೆ ರಾಮನ್

ಕೇರಳವು ಒಂದು 'ರಾಜಕೀಯ ಪ್ರಯೋಗಶಾಲೆ'ಯೆಂಬುದಾಗಿ ವಿಶ್ವ ಪ್ರಸಿದ್ಧಿಯನ್ನು ಪಡೆದಿದೆ. ಎರಡೂವರೆ ವರ್ಷಗಳಿಗೊಮ್ಮೆ ಇಲ್ಲಿ ಚುನಾವಣೆ ನಡೆಯುವುದು ಇಲ್ಲಿನ ಸಾಮಾನ್ಯ ವಿಶೇಷತೆಯಾಗಿದೆ. 1957ರ ಏಪ್ರಿಲ್ 5 ರಂದು ಕಾಂ| ಇ. ಎಂ. ಎಸ್. ನಂಬೂದಿರಿಪಾಡರ ನಾಯಕತ್ವದಲ್ಲಿ ವಿಶ್ವದಲ್ಲಿ ಪ್ರಪ್ರಥಮವಾಗಿ ಚುನಾವಣೆಯ ಮೂಲಕ ಕಮ್ಯೂನಿಸ್ಟ್ ಪಕ್ಷವು ಅಧಿಕಾರಕ್ಕೆ ಬಂದಿರುವುದೂ ಈ ಪುಟ್ಟ ರಾಜ್ಯದಲ್ಲಾಗಿದೆ. ಹದಿನೆಂಟನೆಯ ಶತಮಾನದಲ್ಲಿ ಬ್ರಿಟೀಷರು ಇಲ್ಲಿ ಆಧಿಪತ್ಯವನ್ನು ಸ್ಥಾಪಿಸುವಾಗ ಇಂದಿನ ಕೇರಳ ರಾಜ್ಯವು ತಿರುವಾಂಕೂರು, ಕೊಚ್ಚಿ ಮತ್ತು ಮಲಬಾರ್ ಎಂಬ ಮೂರು ಘಟಕಗಳಾಗಿ ಬೇರ್ಪಡಿಸಿತ್ತು. 1956ರ ನವೆಂಬರ್ 1 ರಂದು ತಿರುವನಂತಪುರದ ದರ್ಭಾರ್ ಸೌಧದಲ್ಲಿ ಗವರ್ನರ್ ಬಿ. ರಾಮಕೃಷ್ಣರಾವ್ ಕೇರಳ ರಾಜ್ಯೋದಯ ಸಮಾರಂಭವನ್ನು ಉದ್ಘಾಟಿಸುವುದರೊಂದಿಗೆ ಇಂದಿನ ಕೇರಳವು ಜನಿಸಿತು.

ಎಡ ಮತ್ತು ಪ್ರಜಾಪ್ರಭುತ್ವ ಪಕ್ಷಗಳು ಭಾರತದಲ್ಲಿ ಅತೀ ಹೆಚ್ಚು ಕಾಲ ಆಳ್ವಿಕೆಯಲ್ಲಿದ್ದ ರಾಜ್ಯವಾಗಿದೆ ಕೇರಳ. ಹದಿನೇಳು(17)ವರ್ಷಗಳ ಕಾಲ ಕಮ್ಯುನಿಸ್ಟ್ ಪಕ್ಷದವರು ಮುಖ್ಯ ಮಂತ್ರಿಗಳಾಗಿ ಕಾರ್ಯನಿರ್ವಹಿಸಿದ್ದಾರೆ. ಕಾಂಗ್ರೆಸ್, ಪಿ.ಎಸ್.ಪಿ.. ಮುಸ್ಲಿಂ ಲೀಗ್ ಎಲ್ಲವೂ ಸೇರಿ ಈ ರಾಜ್ಯವನ್ನು ಆಳಿರುವುದು ಕೇವಲ ಆರು ವರ್ಷಗಳ ಕಾಲ ಮಾತ್ರ. ಅದೂ ಕೂಡಾ ಕೆಲವು ಎಡ ಪಕ್ಷಗಳ ಸಹಾಯದಿಂದ. ಅಂದು ಎಡ ಪಕ್ಷಗಳಲ್ಲಿ ಒಮ್ಮತವಿಲ್ಲದಿರುವುದೇ ಇದರ ಕಾರಣವಾಗಿತ್ತು. ಉಳಿದ ಕಾಲಾವಧಿಯಲ್ಲಿ ಈ ರಾಜ್ಯವು ರಾಜ್ಯಪಾಲರ ಆಳ್ವಿಕೆಗೆ ಒಳಪಟ್ಟಿತ್ತು.

ಈ ರಾಜ್ಯದ ವಿಸ್ತೀರ್ಣ ಕೇವಲ 38,864 ಚ. ಕಿ. ಮೀ. ರಾಜ್ಯದ ಒಟ್ಟು ಜನಸಂಖ್ಯೆ 2,54,03,217 (1981ರ ಜನಗಣತಿಯ ಪ್ರಕಾರ) ಈ ರಾಜ್ಯವನ್ನು 12 ಜಿಲ್ಲೆಗಳಾಗಿ ವಿಂಗಡಿಸಲಾಗಿದೆ. ಕೇವಲ 25 ವರ್ಷಗಳಲ್ಲಿ 12 ಮಂತ್ರಿ ಮಂಡಲಗಳನ್ನು ಕೇರಳದ ಜನತೆ ಕಾಣಬೇಕಾಯಿತು. ಮೇ 19, 1982ರ ಚುನಾವಣೆಯಲ್ಲಿ ಮತ ಚಲಾಯಿಸಲಿರುವ ಮತದಾರರ ಸಂಖ್ಯೆ 1,30.72,828. ಮೇ 19 ರಂದು 140 ಶಾಸನ ಸಭಾ ಸ್ಥಾನಗಳಿಗೆ ನಡೆಯಲಿರುವ ಚುನಾವಣೆಯಲ್ಲಿ ಏಳು ರಾಷ್ಟ್ರೀಯ ಪಕ್ಷಗಳೂ, 13 ರಾಜ್ಯ ಪಕ್ಷಗಳು ಸೇರಿ ಒಟ್ಟು 701 ಹುರಿಯಾಳುಗಳನ್ನು ನಿಲ್ಲಿಸಿ ಚುನಾವಣಾ ಕಣದಲ್ಲಿವೆ. ಇದರಲ್ಲಿ ಸ್ವತಂತ್ರ ಸ್ಪರ್ಧಿಗಳು ಸೇರಿದ್ದಾರೆ. ಮಾರ್ಕ್ಸ್‌ವಾದೀ ಕಮ್ಯೂನಿಸ್ಟ್ ಪಕ್ಷದ ನಾಯಕತ್ವದಲ್ಲಿರುವ ಎಂಟು ಪಕ್ಷಗಳನ್ನು ಸೇರಿದ ಎಡ ಮತ್ತು ಪ್ರಜಾಪ್ರಭುತ್ವ ರಂಗಕ್ಕೂ, ಕಾಂಗೈ ನಾಯಕತ್ವದಲ್ಲಿರುವ 11 ಪಕ್ಷಗಳನ್ನೊಳಗೊಂಡ ಬಲಪಂಥೀಯರಿಗೂ ಆಗಿದೆ ಮುಖ್ಯ ಸ್ಪರ್ಧೆ. ಬಿ.ಜೆ.ಪಿ. ಸ್ಪರ್ಧಿಸುತ್ತಿದ್ದರೂ ಈ ರಾಜ್ಯದಲ್ಲಿ ಅದು ಒಂದು ನೆಲೆ ಇರುವ ಪಕ್ಷವಲ್ಲ.

1980ರ ಜನವರಿ 21 ರಂದು ನಡೆದ ಚುನಾವಣೆಯಲ್ಲಿ ಕಾಂ| ಇ. ಕೆ. ನಾಯನಾರ್‌ರವರ ನಾಯಕತ್ವದಲ್ಲಿರುವ ಎಡ-ಪ್ರಜಾಪ್ರಭುತ್ವ ರಂಗವು ಕೇರಳದಲ್ಲಿ ಅಧಿಕಾರಕ್ಕೆ ಬಂದಿತು. ಆದರೆ ರಂಗದಲ್ಲಿದ್ದ ಕಾಂಗ್ರೆಸ್ (ಎಸ್) ನಾಯಕ ಆಂತೋಣಿಯವರು ಕಾಂಗೈಯೊಡನೆ ನಡೆಸಿದ ಪಿತೂರಿ ಮತ್ತು ಕೇರಳ ಕಾಂಗ್ರೆಸ್ ಮಾಣಿಗುಂಪು ಸರಕಾರಕ್ಕೆ ಬೆಂಬಲವನ್ನು ಹಿಂತೆಗೆದುದರ ಪರಿಣಾಮವಾಗಿ ಕಾಂ| ಇ. ಕೆ. ನಾಯನಾರ್‌ರವರ ಎಡ ರಂಗವು ರಾಜಿನಾಮೆಯಿತ್ತು ಶಾಸನ ಸಭೆಯನ್ನು ವಿಸರ್ಜಿಸಲು ರಾಜ್ಯಪಾಲರೊಡನೆ ಕೋರಿಕೊಂಡಿತು. ಆದರೆ ಇಂದಿರಾ ಸರಕಾರದ ಕೈಗೊಂಬೆಯಂತೆ ಸೇವೆ ನಿರ್ವಹಿಸುವ ರಾಜ್ಯಪಾಲೆ ಜ್ಯೋತಿ ವೆಂಕಟಾಚಲಂ, ಶಾಸನ ಸಭೆಯನ್ನು ವಿಸರ್ಜಿಸುವುದರ ಬದಲು ಅಲ್ಪಸಂಖ್ಯಾತರಾದ ಕಾಂಗೈ ನಾಯಕರಿಗೆ ಸರಕಾರ ರಚಿಸಲು ಅನುಮತಿಯಿತ್ತರು. ಕಾಂಗೈ ನಾಯಕ ಕರುಣಾಕರನ್ ಸರಕಾರ ರಚಿಸಿದ ಮೇಲೆ ಹೇಗೋ 71 ಶಾಸಕರ ಬೆಂಬಲವನ್ನು ಗಿಟ್ಟಿಸಿಕೊಳ್ಳುವುದಕ್ಕೆ ಸಾಧ್ಯವಾಯಿತು. ಎಡರಂಗದ ಸ್ಪೀಕರ್ ಎ.ಪಿ.ಕುರ್ಯನ್ ರಾಜಿನಾಮೆಯಿತ್ತುದರಿಂದಾಗಿ ಹೊಸ ಸ್ಪೀಕರ್ ಐ. ಸಿ. ಜೋಸರನ್ನು ಕರುಣಾಕರನ್ ರಂಗಕ್ಕೆ ಚುನಾಯಿಸಬೇಕಾಗಿ ಬಂದಾಗ ಆಡಳಿತ ಮತ್ತು ವಿರೋಧ ಪಕ್ಷದ ಬಲ 70 : 70 ಆಯಿತು. ಇದರಿಂದಾಗಿ ಸ್ಪೀಕರ್‌ನ 'ಕಾಸ್ಟಿಂಗ್' ಮತದ ಮೇಲೆ ಸರ್ಕಾರದ ಉಳಿವಿನ ಪ್ರಶ್ನೆ ಅವಲಂಬಿತವಾಯಿತು. ಫುಟ್‌ಬಾಲ್ ಪಂದ್ಯಾಟದಲ್ಲಿನ 'ರೆಫೆರಿ' ಪಕ್ಷ ಹಿಡಿದು ಗೋಲು ಹೊಡೆಯುವಂತೆ ಸ್ಪೀಕರ್ ಆಡಳಿತ ರಂಗಕ್ಕೆ ಅನುಕೂಲವಾಗಿ ಮತ ಚಲಾಯಿಸುವುದರಲ್ಲಿ ಯಾವ ಸಂಕೋಚವನ್ನು ತೋರಿಸಲಿಲ್ಲ. ಈ ಸಂವಿಧಾನ ವಿರುದ್ಧದ ನೀತಿಗೆ ಕೇರಳದ ಎಲ್ಲೆಡೆಗಳಲ್ಲಿಯೂ ಎಡರಂಗವು ಚಳವಳಿ ಹೂಡಿತು ಮತ್ತು ಸ್ಪೀಕರ್‌ರ ಮೇಲೆ ಅವಿಶ್ವಾಸ ಮಸೂದೆಯನ್ನು ತಂದಿತು. ಈ ನಾಚಿಕೆಗೆಟ್ಟ ನೀತಿಯನ್ನು ಪ್ರತಿಭಟಿಸಿ ಆಡಳಿತ ರಂಗದಲ್ಲಿದ್ದ ಮಾಣಿ ಗುಂಪಿನ 'ಲೋನಪ್ಪನ್ ನಂಬಡನ್' ಮಾಣಿ ಕೇರಳ ಕಾಂಗ್ರೆಸಿಗೆ ರಾಜಿನಾಮೆಯಿತ್ತು ಕರುಣಾಕರನ್ ಸರ್ಕಾರಕ್ಕೆ ಬೆಂಬಲ ಹಿಂತೆಗೆದು ಎಡ-ರಂಗದೊಡನೆ ಸೇರಿದುದರಿಂದ 73 ದಿನಗಳ ಕರುಣಾಕರನ್ ಸರ್ಕಾರ ಪತನವಾಯಿತು.

ಸಂದರ್ಭಸಾಧಕ ರಂಗ

ಕಾಂಗೈ ನಾಯಕತ್ವದ ಇಂದಿನ ಬಲ-ರಂಗವೂ ಯಾವುದೇ ರೀತಿಯ ಸ್ಪಷ್ಟವಾದ ನೀತಿ ಮತ್ತು ಕಾರ್ಯಕ್ರಮವಿಲ್ಲದ ಒಂದು ಸಮಯಸಾಧಕ ರಂಗವೆಂಬುದು, ಆ ರಂಗದಲ್ಲಿರುವ ಪಕ್ಷಗಳು ತಮ್ಮ ನೀತಿಗೆ ವಿರುದ್ಧವಾದ ನಿಲುವನ್ನೂ ತಾಳಿ ಸೀಟುಗಳನ್ನು ಗಿಟ್ಟಿಸಿಕೊಳ್ಳುವುದಕ್ಕೆ ಮಾತ್ರ ಒಂದಾಗಿರುವುದರಿಂದ ವ್ಯಕ್ತವಾಗುತ್ತಿದೆ. ಜಾತೀಯ ಮೀಸಲಾತಿ ಮತ್ತು ಆರ್ಥಿಕ ಮೀಸಲಾತಿ ಎಂಬ ತದ್ವಿರುದ್ಧವಾದ ಪ್ರಶ್ನೆಯಲ್ಲಿ ಅಸ್ತಿತ್ವಕ್ಕೆ ಬಂದ ಎಸ್. ಆರ್. ಎ. ಮತ್ತು ಎನ್. ಡಿ. ಪಿ. ಒಂದಾಗಿರುವುದು ಇದಕ್ಕೊಂದು ಉದಾಹರಣೆಯಾಗಿದೆ. ಇನ್ನೊಂದೆಡೆ ಹಾವು ಮತ್ತು ಮುಂಗುಸಿಯಂತಿದ್ದ ಕೇರಳ ಕಾಂಗ್ರೆಸ್ ಮಣಿ ಮತ್ತು ಜೋಸೆಫ್ ಗುಂಪು ಒಂದೇ ರಂಗದಲ್ಲಿರುವುದೂ ಇನ್ನೊಂದು ಉದಾಹರಣೆಯಾಗಿದೆ. ಕಾಂಗೈ ವಿರೋಧವನ್ನು ಬಹಿರಂಗವಾಗಿ ಸಾರುತ್ತಿರುವ ಬಿ.ಜೆ.ಪಿ., ಎಸ್.ಆರ್.ಪಿ., ಎನ್.ಡಿ.ಪಿ.ಯೊಡನೆ ರಹಸ್ಯ ಹೊಂದಾಣಿಕೆ ಮಾಡಿನಾಮಪತ್ರಸಲ್ಲಿಸಿಧ ತಮ್ಮ ಪಕ್ಷದ ಅಭ್ಯರ್ಥಿಗಳನ್ನು ಹಿಂತೆಗೆಸಿ ಕಾಂಗೈ ರಂಗಕ್ಕೆ ಪರೋಕ್ಷವಾಗಿ ಬೆಂಬಲವೀಯುವುದೂ ಸಮಯ ಸಾಧಕ ರಂಗವೆಂದು ಎತ್ತಿತೋರಿಸುತ್ತಿದೆ.

ರೈತರಹಿತಾಸಕ್ತಿಗೆ ವಿರುದ್ಧ

ಕೇರಳದ ಮುಖ್ಯ ಆರ್ಥಿಕ ಬೆಳೆಗಳಾದ ರಬ್ಬರ್, ಕೊಕ್ಕೊ, ಕರಿಮೆಣಸಿನ ಬೆಳೆಗಳಿಗೆ ನ್ಯಾಯಬೆಲೆ ನಿಶ್ಚಯಿಸಿ ಕೃಷಿಕರ ಹಿತಾಸಕ್ತಿಯನ್ನು ಸಂರಕ್ಷಿಸುವುದರ ಬದಲು, ವ್ಯಾಪಾರೀ ಬಂಡವಾಳಶಾಹಿಗಳಿಗೆ ವಿದೇಶಗಳಿಂದ ಇವುಗಳನ್ನು ಆಮದು ಮಾಡಲು ಕಾಂಗೈ ಸರಕಾರದ ಲೈಸೆನ್ಸ್ ಇತ್ತಿರುವುದು ಇವೆಲ್ಲ ಬೆಳೆಗಾರರ ಹಿತಾಸಕ್ತಿಗೆ ವಿರುದ್ಧವಾಗಿದೆ.

ಕಾಂಗೈ ಸರಕಾರದ ಈ ನೀತಿಗೆ ವಿರುದ್ಧವಾಗಿ ಕೇರಳದ ಕೃಷಿಕರು ಮೇ 19ರ ಚುನಾವಣೆಯಲ್ಲಿ ಬಲ-ಪ್ರತಿಗಾಮಿ ರಂಗಕ್ಕೆ ವಿರುದ್ಧವಾಗಿ ಮತಚಲಾಯಿಸುವರೆಂಬುದರಲ್ಲಿ ಅನುಮಾನವಿಲ್ಲ.

ಕಾಂಗೈ ರಂಗದ ಪತನ ಖಚಿತ

ಕಾಂಗೈರಂಗದಲ್ಲಿ ಎಲ್ಲೆಡೆಗಳಲ್ಲಿಯೂ ಬಿರುಕು ಮತ್ತು ಪರಸ್ಪರ ಗುದ್ದಾಟ ತೋರುತ್ತಿದೆ. ಸೀಟು ವಿಭಜನೆಯಲ್ಲಿ ಅಸಂತುಷ್ಟರಾದ ಹಲವಾರು ಕಾಂಗೈ ಸದಸ್ಯರು ಕೇರಳದ ಉದ್ದಗಲಕ್ಕೂ ರೆಬೆಲ್ ಉಮೇದುವಾರರಾಗಿ ಸ್ಪರ್ಧಿಸುವುದು ಕಾಂಗೈ ರಂಗವು ಛಿದ್ರವಾಗುತ್ತಿದೆಯೆಂಬುದಕ್ಕೆ ಉದಾಹರಣೆಯಾಗಿದೆ. ಕಾಂಗೈಪಕ್ಷಕ್ಕೆ ರಾಜಿನಾಮೆಯಿತ್ತು ಅದರ ಪ್ರಮುಖ ನಾಯಕ ಕುಂಞ್ಞಿರಾಮನ ನಂಬ್ಯಾರ್ "ಉದುವು" ಕ್ಷೇತ್ರದಲ್ಲಿಯೂ, ಟಿ. ಕೆ. ಹಂಸ "ನಿಲಂಬೂರು" ಕ್ಷೇತ್ರದಲ್ಲಿಯೂ, ಎಡರಂಗದ ಬೆಂಬಲದಿಂದ ಸ್ವತಂತ್ರ ಉಮೇದ್ವಾರರಾಗಿ ಸ್ಪರ್ಧಿಸುವುದನ್ನು ಪ್ರತ್ಯೇಕವಾಗಿ ಗಮನಿಸಬೇಕಾಗದೆ.

ಎಡರಂಗದ ಚುಣಾವಣಾ ಪ್ರಣಾಳಿಕೆ

ಕೇಂದ್ರ ಸರಕಾರ ಕೃಷಿಕರಿಗೆದ್ರೋಹ ಬಗೆಯುವಂತಹ ಆಮದು ನೀತಿಯನ್ನು ಅನುಸರಿಸುವುದರ ವಿರುದ್ಧ ಕೃಷಿಕರ ಹಿತಾಸಕ್ತಿಗಾಗಿ ಹೋರಾಟವನ್ನು ಮುಂದುವರಿಸುವುದು, ರಾಜ್ಯಗಳಿಗೆ ಹೆಚ್ಚು ಅಧಿಕಾರವನ್ನು ಕೊಡಬೇಕು ಮತ್ತು ಕೇಂದ್ರ ಸರಕಾರೀ ನೌಕರಿಗೆ ನೊಂದಾಯಿಸುವಾಗ ಕೇರಳದ ಅಭ್ಯರ್ಥಿಗಳಿಗೆ ಪ್ರತ್ಯೇಕ ಪೋಲೀಸ್ ವೆರಿಫಿಕೇಶನ್ ರದ್ದು ಮಾಡುವುದು, ನಾಯನಾರ್ ಸರ್ಕಾರ ಜ್ಯಾರಿಗೆ ತಂದ ಕೃಷಿ ಮಜೂರರ ನಿವೃತ್ತಿ ವೇತನ (ಕರುಣಾಕರನ್ ಸರ್ಕಾರ ರದ್ದು ಮಾಡಿತ್ತು.) ಪುನ: ಜ್ಯಾರಿಗೆ ತರುವುದೂ, ನಿರುದ್ಯೋಗ ವೇತನ ನೀಡುವುದು ನಾಗರೀಕ ಹಕ್ಕುಗಳ ಸಂರಕ್ಷಣೆ, ಕಾರ್ಮಿಕರ ಸ್ವಾತಂತ್ರ್ಯ ಮತ್ತು ಪ್ರಜಾಸತ್ತಾತ್ಮಕ ಹಕ್ಕುಗಳ ಸಂರಕ್ಷಣೆ, ಬೀಡಿ, ಮೀನುಗಾರಿಕೆ, ಕೈಮಗ್ಗ, ಗೋಡಂಬಿ, ಪ್ಲಾಂಟಿಷನ್ ಇವೇ ಮೊದಲಾದ ವ್ಯವಸಾಯದ ಕಾರ್ಮಿಕರಿಗೆ ಅನುಕೂಲ ಒದಗಿಸಿ ಕೊಡುವುದು, ಲಾಕೌಟ್ ಘೋಷಿಸುವ, ಮಾತುಕತೆಗೆ ಹಾಜರಾಗದಿರುವ ಮಾಲೀಕರ ಕಾರ್ಮಿಕ ವಿರೋಧಿ ನೀತಿಗಳಿಗೆ ವಿರುದ್ಧದ ಕಾರ್ಯಕ್ರಮ ಇವೇ ಮೊದಲಾದವುಗಳು ಎಡರಂಗದ ಚುನಾವಣಾ ಪ್ರಣಾಳಿಕೆಯಲ್ಲಿದೆ.

ಪೊಳ್ಳುಭರವಸೆಗಳಿಗೆ ಮರಳಾಗಲಿಕ್ಕಿಲ್ಲ

ರೈತ–ಕಾರ್ಮಿಕ ವಿರೋಧೀ ನೀತಿಯನ್ನೇ ತನ್ನ ದಿನನಿತ್ಯದ ಕಾರ್ಯಕ್ರಮವನ್ನಾಗಿ ಅಂಗೀಕರಿಸಿದ ಇಂದಿರಾಗಾಂಧಿ ಚೀಲ ತುಂಬಾ ಭರವಸೆಗಳೊಂದಿಗೆ ದಿಲ್ಲಿಯಿಂದ ಹಾರಿ ಬಂದು ಹೆಲಿಕಾಪ್ಟರ್‌ನಲ್ಲಿ ಕೇರಳದಲ್ಲಿ ಸಂಚರಿಸಿದರೂ, ರೈತ ಕಾರ್ಮಿಕರು ನ್ಯಾಯ ಸಮ್ಮತವಾದ ಬೇಡಿಕೆಗಳನ್ನು ಮುಂದಿಟ್ಟು ಶಾಂತಿಯುತ ಹೋರಾಟ ಮಾಡಿದರೆ ಗುಂಡಿಟ್ಟು ಕೊಲ್ಲುವ ಗುಂಡೂರಾವ್ ಮತ್ತು ಸಂಗಡಿಗರು ಚುನಾವಣೆಗಾಗಿ ಪೊಳ್ಳು ಭರವಸೆಗಳನ್ನು ಹೊತ್ತು ಕೇರಳದಲ್ಲಿ ಸಂಚರಿಸಿದರೂ, ಇವರ ನಿಜರೂಪವನ್ನರಿತ ಕೇರಳದ ಜನತೆ ಇವರ ಬೇಳೆ ಬೇಯಲು ಬಿಡಲಿಕ್ಕಿಲ್ಲ.

ಎಡರಂಗದ ವಿಜಯ ಖಚಿತ

ಕೇರಳದ ಪ್ರಜಾಪ್ರಭುತ್ವ ಚಳುವಳಿಗೆ ಹಲವು ದಶಕಗಳಿಂದ ನಾಯಕತ್ವ ಕೊಟ್ಟಿರುವ ಮತ್ತು ಕೇರಳದ ದುಡಿಯುವ ಜನತೆಯ ಜೀವನ್ಮರಣ ಹೋರಾಟದಲ್ಲಿ ಅವಿರತವಾಗಿ ಪಾಲ್ಗೊಂಡ ಮಾರ್ಕ್ಸ್‌ವಾದೀ ಕಮ್ಯೂನಿಸ್ಟ್ ಪಕ್ಷ ಮತ್ತು ಅದರ ನಾಯಕತ್ವದಲ್ಲಿರುವ ಎಡ-ಪ್ರಜಾಪ್ರಭುತ್ವ ಪಕ್ಷಗಳ ಅಭ್ಯರ್ಥಿಗಳನ್ನು ಕೇರಳದ ಜನತೆ ಚುನಾಯಿಸುವರೆಂಬುದರಲ್ಲಿ ಅನುಮಾನವಿಲ್ಲ.

ಹಿಂದೂ ಭೂಮಾಲೀಕರಿಗೂ, ಬ್ರಿಟೀಷರಿಗೂ ವಿರುದ್ಧವಾಗಿ 1920–21ರ ದಶಕದಲ್ಲಿ ಹೋರಾಡಿ 10,000ಕ್ಕಿಂತಲೂ ಹೆಚ್ಚು ಮುಸ್ಲಿಂ ಬಾಂಧವರನ್ನು ಬಲಿದಾನವಿತ್ತ "ಮಲಬಾರ್ ದಂಗೆ"ಯಲ್ಲಿ ಹುತಾತ್ಮರಾದ ಪೀಳಿಗೆಯವರಿರುವ ಮಲಪ್ಪುರಂ, ತಿರೂರಗಾಂಡಿ, ಮಂಚೇರಿ, ಪೆರಿಂದಲ್‌ಮಣ್ಣ ಮೊದಲಾದೆಡೆಗಳಲ್ಲಿರುವ ಮುಸ್ಲಿಂ ಬಾಂಧವರೂ, ಗುರುವಾಯೂರು ಸತ್ಯಾಗ್ರಹದಂತಹ ಹೋರಾಟ, ಸರ್. ಸಿ. ಪಿ. ರಾಮಸ್ವಾಮಿಯ (ತಿರುವಾಂಕೂರು ದಿವಾನ) ಕ್ರೂರ ದಬ್ಬಾಳಿಕೆ ಮತ್ತು ಏಕಾಧಿಪತ್ಯ ಆಡಳಿತಕ್ಕೆ ವಿರುದ್ಧವಾಗಿ ಹೋರಾಡಿದ ಐತಿಹಾಸಿಕ "ಪುನಪ್ಪುರ–ವಯಲಾರ್" ಹೋರಾಟಗಾರರ ಪೀಳಿಗೆಯವರಾದ, ಚೇರ್ತಲ, ಅಲಪ್ಪಿಯ ಕೃಷಿಕರೂ ಕಾರ್ಮಿಕರೂ, ಕೈಯ್ಯೂರಿನ ಧೀರ ಹೋರಾಟದ ಪರಂಪರೆಯಿರುವ ಕೃಷಿಕರೂ, ಕೃಷಿ ಮಜೂರರೂ, ಭೂಮಾಲೀಕರ ಪದ್ಧತಿಯ ನಿರ್ಮೂಲನಕ್ಕಾಗಿ ಕಾಂ| ಎ. ಕೆ. ಜಿ.ಯ ನಾಯಕತ್ವದಲ್ಲಿ ಹೋರಾಡಿದ ಗಡಿನಾಡ ಕನ್ನಡ ಪ್ರದೇಶವಾದ ಕಾಸರಗೋಡಿನ ರೈತರೂ ಕೃಷಿಕೂಲಿಗಾರರೂ, ಅಲ್ಪಸಂಖ್ಯಾತರ ಹಿತವನ್ನೂ ಮನ್ನಿಸದೆ "ಮಂಜೇಶ್ವರ" ಕ್ಷೇತ್ರದಲ್ಲಿಯೂ ಕಾಂಗೈ–ರಂಗವು, ಎಡ-ರಂಗದ ಉಮೇದಾರರಾದ ಡಾ|| ಸುಬ್ಬರಾವ್‌ರವರಿಗೆ ವಿರುದ್ಧ ನಿಲ್ಲಿಸಿರುವ ಸ್ಪರ್ಧಿಯನ್ನು ಸೋಲಿಸಿ, ಕೇರಳದ ಪ್ರಬುದ್ಧ ಜನತೆ ಮೇ 19ರ ಚುನಾವಣೆಯಲ್ಲಿ ಕಾಂಗೈ-ರಂಗಕ್ಕೆ ವಿರುದ್ಧ ಮತಚಲಾಯಿಸಿ, ದುಡಿಯುವ ವರ್ಗದ ವಿಮೋಚನೆಗಾಗಿ ಹೋರಾಡಿ ಮಡಿದ ಅಸಂಖ್ಯಾತ ಧೀರ ಹುತಾತ್ಮರುಗಳನ್ನು ಸ್ಮರಿಸುವುದಲ್ಲದೆ, ಈ ಜನದ್ರೋಹಿ ಕಾಂಗೈ ನೇತೃತ್ವದ ರಂಗವನ್ನು ಮಣ್ಣುಗೂಡಿಸಿ ದುಡಿಯುವ ವರ್ಗದ ಹಿತಾಸಕ್ತಿಯನ್ನು ಎತ್ತಿ ಹಿಡಿಯುವರೆಂದು ಆಶಿಸೋಣ.

ಜನ ವಿರೋಧಿ ಆಮದು - ರಫ್ತು ನೀತಿ

(3ನೇ ಪುಟದಿಂದ)

ಕುಸಿಯುತ್ತಲೂ ಇದೆ. ರಫ್ತು ವ್ಯಾಪಾರ ಹಣದ ರೂಪದಲ್ಲಿ ಹಣದುಬ್ಬರದಿಂದಾಗಿ ಹೆಚ್ಚಿದೆ ಎಂದು ತೋರಿ ಬಂದರೂ, ರಫ್ತು ಮಾಡುತ್ತಿರುವ ಸಾಮಗ್ರಿಗಳ ಪ್ರಮಾಣ ಮಾತ್ರ ಕಡಿಮೆಯಾಗುತ್ತಿದೆ.

ಕಾರಣ ? ಬಂಡವಾಳಶಾಹಿ ರಾಷ್ಟ್ರಗಳು ಆರ್ಥಿಕ ಹಿಂಜರಿತವನ್ನು ಅನುಭವಿಸುತ್ತಿದ್ದು ತಮ್ಮ ಆಮದು ಕಡಿಮೆ ಮಾಡಿಕೊಳ್ಳಲು ಸುಂಕದ ಗೋಡೆ ಉತ್ತರಿಸುತ್ತಿವೆ. ಜೊತೆಗೇ, ಭಾರತದಂತಹ ಅಭಿವೃದ್ಧಿ ಹೊಂದುತ್ತಿರುವ ದೇಶಗಳಲ್ಲಿ ತಮ್ಮ ರಫ್ತು ವ್ಯಾಪಾರವನ್ನು ಹೆಚ್ಚಿಸಲು ಪ್ರಯತ್ನಿಸುತ್ತಿವೆ. ಅಭಿವೃದ್ಧಿ ಹೊಂದಿದ ಬಂಡವಾಳಶಾಹಿ ರಾಷ್ಟ್ರಗಳ ಆಮದು ಸುಂಕದ ಗೋಡೆಯನ್ನು ಏರಿ ಅಭಿವೃದ್ಧಿ ಹೊಂದುತ್ತಿರುವ ದೇಶಗಳು ತಮ್ಮ ರಫ್ತು ವ್ಯಾಪಾರ ಹೆಚ್ಚಿಸಲು ಸಾಧ್ಯವಾಗುತ್ತಲೇ ಇಲ್ಲ. ನಮ್ಮ ದೇಶದ ನಿಜವಾದ ಧೋರಣೆ ಹೇಗಿರಬೇಕಿತ್ತು ? ಸಮಾಜವಾದಿ ರಾಷ್ಟ್ರಗಳಲ್ಲಿ ನಮ್ಮ ರಫ್ತು ಹೆಚ್ಚಿಸಬೇಕು. ಆ ದೇಶಗಳಲ್ಲಿ ಅಭಿವೃದ್ಧಿ ಹೊಂದುತ್ತಿರುವ ದೇಶಗಳ ರಫ್ತಿನ ಮೇಲೆ ಹೆಚ್ಚಿನ ನಿಶೇದ ನಿಯಂತ್ರಣಗಳಿರುವುದಿಲ್ಲ. ಬಂಡವಾಳಶಾಹಿ ರಾಷ್ಟ್ರಗಳಿಂದ ನಮ್ಮ ಆಮದು ಕಡಿಮೆಯಾಗುತ್ತಾ ಸ್ವಾವಲಂಬನೆಯ ಮಾರ್ಗ ಹಿಡಿಯಬೇಕಾಗಿತ್ತು. ಆದರೆ, ಈಗಿನ ಸರಕಾರ ಅನುಸರಿಸುತ್ತಿರುವುದು ತೀರಾ ವಿರುದ್ಧವಾದ, ಜನವಿರೋಧಿ ಆಮದು -ರಫ್ತು ದೋರಣೆ.

4. ವಿದೇಶಿ ವ್ಯಾಪಾರದಲ್ಲಿ ಕೊರತೆ: ವಿಶ್ವಬ್ಯಾಂಕು, ಅಂತರಾಷ್ಟ್ರೀಯ ಹಣಕಾಸು ಸಂಸ್ಥೆಗಳ ಒತ್ತಾಯದಿಂದ ಭಾರತ ಸರಕಾರ ವಿರುದ್ಧ ನೀತಿಯನ್ನು ಅನುಸರಿಸುತ್ತಿದೆ. ಬಂಡವಾಳಶಾಹಿ ರಾಷ್ಟ್ರಗಳು ತಮ್ಮ ಆಮದು ವ್ಯಾಪಾರಕ್ಕೆ ಪ್ರಬಲವಾದ ನಿಯಂತ್ರಣ ವಿಧಿಸುತ್ತಿರುವಾಗ, ಭಾರತದಂತಹ ಅಭಿವೃದ್ಧಿ ಹೊಂದುತ್ತಿರುವ ರಾಷ್ಟ್ರಗಳ ಆಮದು ಮಾತ್ರ ಬಂಡವಾಳಶಾಹಿ ರಾಷ್ಟ್ರಗಳಿಗೆ ಮುಕ್ತವಾಗಿ ತೆರೆದಿಡಲಾಗುತ್ತಿದೆ. ಇದರಿಂದಾಗಿ ವಿದೇಶಿ ವ್ಯಾಪಾರ ಮತ್ತು ವಿದೇಶಿವಿನಿಮಯ ಕೊರತೆಗಳು ಹೆಚ್ಚುತ್ತಿವೆ. ವಿದೇಶಿ ವ್ಯಾಪಾರದ ಕೊರತೆಯು 1981-82 ವರ್ಷದಲ್ಲಿ ರೂ. 6000 ಕೋಟಿಗೇರಿದೆ! 1982-83ರ ಇನ್ನಷ್ಟು ಉದಾರ ಆಮದು ನೀತಿಯಿಂದ ಈ ಕೊರತೆ ಭಾರೀ ಪ್ರಮಾಣದಲ್ಲಿ ಹೆಚ್ಚುವ ಸಂಭವವಿದೆ. 1983-84ರಲ್ಲಿಯೂ ಉದಾರ ಆಮದು ನೀತಿಯನ್ನೇ ಅನುಸರಿಸುವುದಾಗಿ ಭಾರತ ಅಂತರಾಷ್ಟ್ರೀಯ ಹಣಕಾಸು ಸಂಸ್ಥೆಗೆ ಆಶ್ವಾಸನೆ ಕೊಟ್ಟಿದ್ದರಿಂದ, ವಿದೇಶಿ ವ್ಯಾಪಾರದ ಕೊರತೆ ಮತ್ತಷ್ಟು ಹೆಚ್ಚಲಿದೆ. ಪರಿಣಾಮವಾಗಿ 1981-82 ರಿಂದ 1983-84ರ ಮೂರು ವರ್ಷಗಳಲ್ಲಿ ರೂ. 5000 ಕೋಟಿ ಹೆಚ್ಚು ವಿದೇಶಿವಿನಿಮಯ ಕೊರತೆ ಸಂಭವಿಸಲಿದೆ. ಅಂತರಾಷ್ಟ್ರೀಯ ಹಣಕಾಸು ಸಂಸ್ಥೆಯಿಂದ ಇದೇ ಅವಧಿಯಲ್ಲಿ ನಡೆಯುವ ರೂ. 5000 ಕೋಟಿ ಸಾಲವು ಈ ಕೊರತೆ ಭರಿಸುವುದಕ್ಕೇ ವಿನಿಯೋಗವಾಗುವುದು. ಮೂರು ವರ್ಷಗಳ ನಂತರ ಅಂತರಾಷ್ಟ್ರೀಯ ಹಣಕಾಸು ಸಂಸ್ಥೆಯಿಂದ ಬರುವ ಸಾಲ ನಿಂತು ಹೋದಾಗ, ಪುನಃ ನಮ್ಮ ದೇಶ ಭಾರೀ ಮೊತ್ತದ ವಿದೇಶಿ ವ್ಯಾಪಾರದ ಕೊರತೆಯಲ್ಲಿ ಮುಳುಗಿರಬೇಕಾಗುವುದು. ನಾವು ವಿದೇಶಿ ಸಾಲದಿಂದ ಮುಕ್ತವಾಗುವ ಸಾಧ್ಯತೆಯೇ ಇಲ್ಲದಾಗಿದೆ. ಸಾಲದ ವಿಷ ಚಕ್ರದಲ್ಲಿ ನಮ್ಮ ದೇಶದ ಜನರು ಸಿಕ್ಕಿ ಅತೀವ ಕಷ್ಟ ನಷ್ಟಗಳಿಗೆ ಒಳಗಾಗಬೇಕಾಗುವುದು.

ಈ ಜನವಿರೋಧಿ ನೀತಿಯನ್ನು ಎಡ ಮತ್ತು ಪ್ರಜಾಪ್ರಭುತ್ವ ಶಕ್ತಿಗಳು ಒಗ್ಗಟ್ಟಾಗಿ ಎದುರಿಸಬೇಕಾಗಿದೆ.

•

ರಾಜ್ಯಪಾಲರ ಸುಗ್ರೀವಾಜ್ಞೆಯ ಖಂಡನೆ

ಪರೀಕ್ಷೆಗಳಲ್ಲಿ ನಕಲು ಮಾಡುವುದನ್ನು ತಡೆಗಟ್ಟಲೆಂದು ಕಳೆದ ಏಪ್ರಿಲ್ 27 ರಂದು ರಾಜ್ಯಪಾಲರು ಹೊರಡಿಸಿರುವ ಸುಗ್ರೀವಾಜ್ಞೆಯನ್ನು ಭಾರತ ವಿಧ್ಯಾರ್ಥಿ ಫೆಡರೇಷನ್ (ಎಸ್.ಎಫ್.ಐ.) ಕರ್ನಾಟಕ ರಾಜ್ಯ ಸಮಿತಿಯು ತೀವ್ರವಾಗಿ ಖಂಡಿಸಿದೆ.

ಈ ಸುಗ್ರೀವಾಜ್ಞೆಯು ವಿಶ್ವವಿದ್ಯಾಲಯ ಆಡಳಿತಾಧಿಕಾರದ ಮೇಲಿನ ನೇರ ಹಸ್ತಕ್ಷೇಪವಾಗಿದೆ. ಪರೀಕ್ಷೆಗಳಲ್ಲಿ ನಕಲು ಮಾಡುವುದನ್ನು ಎಸ್. ಎಫ್. ಐ. ಖಂಡಿತ ಪ್ರೋತ್ಸಾಹಿಸುವುದಿಲ್ಲ, ಆದರೆ ಶಿಕ್ಷಣ ವ್ಯವಸ್ಥೆಯ ಮೂಲ ದೋಷದ ಫಲವಾದ ಈ ಸಮಸ್ಯೆಗೆ ಪೋಲೀಸರು ಉತ್ತರವಲ್ಲ. ಸುಗ್ರೀವಾಜ್ಞೆಯು ಪೋಲೀಸರ ಅನಗತ್ಯ ಪ್ರವೇಶಕ್ಕೆ ಅವಕಾಶ ಕೊಟ್ಟಿರುವುದಲ್ಲದೆ, ಪರೀಕ್ಷಾ ಕಾರ್ಯವನ್ನು ನಿರ್ವಹಿಸುವ ಅಧ್ಯಾಪಕ ವರ್ಗದ ಪ್ರಜಾಪ್ರಭುತ್ವ ಹಕ್ಕುಗಳ ಮೇಲಿನ ದಾಳಿಯಾಗಿದೆ. ಆದರಿಂದ ರಾಜ್ಯಪಾಲರು ಈ ಕೂಡಲೆ ಸುಗ್ರೀವಾಜ್ಞೆಯನ್ನು ಹಿಂತೆಗೆದುಕೊಳ್ಳಬೇಕೆಂದು ಮತ್ತು ಪಿ.ಯು.ಸಿ. ವಿಧ್ಯಾರ್ಥಿಗಳು ಸೇರಿದಂತೆ ಪರೀಕ್ಷೆಗಳನ್ನು ಬಹಿಷ್ಕರಿಸಿರುವ ಎಲ್ಲಾ ವಿದ್ಯಾರ್ಥಿಗಳಿಗೂ ಮರುಪರೀಕ್ಷೆ ನಡೆಸುವಂತೆ ಎಸ್.ಎಫ್.ಐ. ಒತ್ತಾಯಿಸುತ್ತದೆ.

ವಿದ್ಯಾರ್ಥಿ ಮುಖಂಡ ಎಂ. ಅಂಜನಪ್ಪನವರ ಬಂಧನವನ್ನು ಖಂಡಿಸಿ ಕೂಡಲೇ ಬಿಡುಗಡೆ ಮಾಡಲು ಒತ್ತಾಯಿಸಿದೆ.

•

ಶಿಕ್ಷಕ ವಿರೋಧಿ ಸುಗ್ರೀವಾಜ್ಞೆಯನ್ನು ವಾಪಸ್ ಪಡೆಯಲು ಒತ್ತಾಯ

ಕಾ|| ಕೆ. ವಿ ರಾಯಚೂರ, (ಪ್ರಧಾನ ಕಾರ್ಯದರ್ಶಿ, ಕರ್ನಾಟಕ ಸೆಕೆಂಡರಿ ಸ್ಕೂಲ್ ಎಂಪ್ಲಾಯೀಸ್ ಅಸೋಸಿಯೇಷನ್) ಅವರು ಈ ಕೆಳಕಂಡ ಪತ್ರಿಕಾ ಹೇಳಿಕೆ ನೀಡಿದ್ದಾರೆ :

ಕರ್ನಾಟಕ ಮಾಧ್ಯಮಿಕ ಶಾಲಾ ನೌಕರರ ಕೇಂದ್ರ ಸಮಿತಿಯು ಸರಕಾರ ಇತ್ತೀಚಿಗೆ ಹೊರಡಿಸಿದ ಪರೀಕ್ಷೆಯಲ್ಲಿಯ ನಕಲು ಮಾಡುವದು ಪರೀಕ್ಷೆಗಳ ಉಸ್ತುವಾರಿ ಮತ್ತು ಉತ್ತರ ಪತ್ರಿಕೆಗಳ ಮೌಲ್ಯಮಾಪನ ಇವುಗಳಿಗೆ ಸಂಬಂಧಿಸಿದ ಸುಗ್ರಿವಾಜ್ಞೆಯನ್ನು ಶಿಕ್ಷಕ ವಿರೋಧಿ ಕ್ರಮ ಎಂದು ಖಂಡಿಸಿದೆ. ಸರಕಾರದ ಈ ಕಾನೂನಿನಿಂದ ಆಡಳಿತ ಮಂಡಳಿ ಮತ್ತು ಶಿಕ್ಷಣ ಇಲಾಖೆ ಕೂಡಿ ತಮಗೆ ಬೇಡವಾದ ಶಿಕ್ಷಕರನ್ನು ಕೆಲಸದಿಂದ ತೆಗೆದು ಹಾಕಲು ಖಂಡಿತ ಉಪಯೋಗಿಸಿಕೊಳ್ಳುತ್ತಾರೆ ಎಂದು ಸಮಿತಿ ಅಭಿಪ್ರಾಯಪಟ್ಟಿದೆ.

ಪರೀಕ್ಷೆಗಳ ಮೇಲ್ವಿಚಾರಣೆ ಮತ್ತು ಮೌಲ್ಯಮಾಪನ ಇವುಗಳನ್ನು ಒಪ್ಪಿಕೊಳ್ಳುವುದು ಅಥವಾ ಬಿಡುವುದು ಶಿಕ್ಷಕರ ಹಕ್ಕಿಗೆ ಒಳಪಟ್ಟ ವಿಷಯ. ಸರಕಾರ ಈ ಕಾನೂನಿನಿಂದ ಶಿಕ್ಷಕರ ಸೇವೆಯನ್ನು ಆವಶ್ಯಕ ಸೇವೆ ಎಂದು ಅಪ್ರತ್ಯಕ್ಷವಾಗಿ ಸಾರಿದೆ. ಸಭೆಯು ಇದನ್ನು ಶಿಕ್ಷಕರ ಸಂಘಟನೆಯ ಹಕ್ಕುಗಳ ಮೇಲಿನ ಅಕ್ರಮಣ ಎಂದು ಕರೆದಿದೆ. ಸರಕಾರದ ಈ ಶಿಕ್ಷಕ ವಿರೋಧಿ, ಮತ್ತು ಜನ ವಿರೋಧಿ ಕಾನೂನನ್ನು ಹಿಂತೆಗೆದುಕೊಳ್ಳಬೇಕೆಂದು ಸರಕಾರವನ್ನು ಒತ್ತಾಯಿಸುವುದು. ಇಲ್ಲವಾದರೆ ಇದರ ವಿರುದ್ಧ ಉಗ್ರ ಹೋರಾಟಕ್ಕೆ ಕರೆ ನೀಡಬೇಕಾದಿತೆಂದು ಸಮಿತಿ ಸರಕಾರವನ್ನು ಎಚ್ಚರಿಸಿದೆ. ಸರಕಾರದ ಈ ಶಿಕ್ಷಣ ವಿರೋಧಿ ನೀತಿಯನ್ನು ಬಲವಾಗಿ ಪ್ರತಿಭಟಿಸಬೇಕೆಂದು ಸಮಿತಿ ಸಾರ್ವಜನಿಕರಿಗೆ, ಸಂಘ- ಸಂಸ್ಥೆಗಳಿಗೆ, ಮತ್ತು ರಾಜಕೀಯ ಪಕ್ಷಗಳಿಗೆ ವಿನಂತಿಸಿದೆ.

ಇದೇ ರೀತಿ ಕೇಂದ್ರ ಸರಕಾರ ಶಿಕ್ಷಣ ಸಂಸ್ಥೆಗಳ ಮತ್ತು ಆಸ್ಪತ್ರೆಗಳ ನೌಕರರನ್ನು ಔದ್ಯಮಿಕ ತಂಟೆಗಳ ಕಾಯಿದೆಯ ಅಳಿವಿನಿಂದ ತೆಗೆದುಹಾಕುವ ಬಗ್ಗೆ ಲೋಕಸಭೆಯಲ್ಲಿ ಕಾಯಿದೆಗೆ ತಿದ್ದುಪಡಿ ತಂದುದನ್ನು ಬಲವಾಗಿ ಪ್ರತಿಭಟಿಸಿದೆ. ಕೇಂದ್ರ ಸರಕಾರದ ಈ ಶಿಕ್ಷಕ ವಿರೋಧಿ ನೀತಿಯನ್ನು ಸಮಿತಿ ಬಲವಾಗಿ ಖಂಡಿಸಿದೆ.

ಈ ವರ್ಷದಿಂದ ಎಸ್. ಎಸ್. ಎಲ್. ಸಿ. ವರ್ಗಗಳಿಗೆ ವಿಷಯಗಳನ್ನು ಕಲಿಸುವ ಶಿಕ್ಷಕರ ವಿಷಯದಲ್ಲಿ ರಾಜ್ಯದ ಸರಾಸರಿಗಿಂತ ಪರಿಣಾಮ ಕಡಿಮೆಯಾದರೆ ಅಂಥ ಶಿಕ್ಷಕರ ಒಂದು ವೇತನದ ಬಡ್ತಿಯನ್ನು ತಡೆಹಿಡಿಯಬೇಕೆಂದು ಸರಕಾರ ಆಡಳಿತ ಮಂಡಳಿಗಳಿಗೆ ಆದೇಶ ನೀಡಿದೆ. ಸರ್ಕಾರದ ಈ ಕ್ರಮವನ್ನು ಸಮಿತಿಯು ಬಲವಾಗಿ ಖಂಡಿಸಿದೆ. ಇದೇ ಜೂನ್ 1 ನೇ ತಾರೀಖಿನೊಳಗಾಗಿ ಈ ಶಿಕ್ಷಕ ವಿರೋಧಿ ಆದೇಶವನ್ನು ಹಿಂತೆಗೆಯದಿದ್ದರೆ ಈ ವರ್ಷ ಯಾವ ಶಿಕ್ಷಕರನ್ನೂ ಎಸ್. ಎಸ್. ಎಲ್. ಸಿ. ವರ್ಗಗಳಿಗೆ ವಿಷಯ ತೆಗೆದುಕೊಳ್ಳಲು ನಿರಾಕರಿಸಬೇಕೆಂದು ಸಮಿತಿ ಸಂಘದ ಎಲ್ಲ ಸದಸ್ಯರಿಗೆ ಆದೇಶ ನೀಡಿದೆ.

ಶ್ರೀ ದೇವೆಗೌಡಾ ಸಮಿತಿ ಸಲ್ಲಿಸಿದ ವರದಿಯನ್ನು ಮುಸೂದೆ ರೂಪದಲ್ಲಿ ಮುಂದಿನ ವಿಧಾನ ಮಂಡಳ ಅಧಿವೇಶನದಲ್ಲಿ ಮಂಡಿಸಲೇಬೇಕೆಂದು ಸರ್ಕಾರವನ್ನು ಸಮಿತಿ ಒತ್ತಾಯಿಸಿದೆ.

ಹಸಿದ ಕಣ್ಗಳಿಂದ

ದಂಗೆ ಎದ್ದವರು !

ಬೆಂಗಳೂರಿನ ಪೋಲೀಸರಿಗೆ ಈಗ ಭಾರಿ ತಲೆಬಿಸಿ ಆಗತೊಡಗಿದೆ. ಸದಾ ರಸ್ತೆ-ರಸ್ತೆಗಳಲ್ಲಿ, ಸಂದಿಗೊಂದಿಗಳಲ್ಲಿ ಊಟ, ನಿದ್ರೆ ಬಿಟ್ಟು ತಮ್ಮ ಕರ್ತವ್ಯದ ತುತ್ತ ತುದಿಯಲ್ಲಿದ್ದಾರೆ. ಕೂಗೆತ್ತಿದವರ ಕೈ ಮುರಿಯಲು ಅವರ ಲಾಠಿಗಳು ತಯಾರಾಗಿವೆ, ಬಾಯಿ ಬಿಟ್ಟರೆ ಬಾಯಿ ಮುಚ್ಚಿಸಲು ನಿಷೇದಾಜ್ಞೆ, ಸುಗ್ರಿವಾಜ್ಞೆ ಹೊರಡುತ್ತಿವೆ.

ಯಾಕೆ ಹೀಗೆ ? ಜನರೇಕೆ ಹೀಗೆ ಮಾಡುತ್ತಿದ್ದಾರೆ ? ಪೋಲಿಸರೇಕೆ ಹಾಗೆ ಮಾಡುತ್ತಿದ್ದಾರೆ ? ನಿತ್ಯ ದೊಂಬಿ, ಗಲಭೆ, ಚಳುವಳಿಗಳಿಗೆ ಲಾಟಿ ಚಾರ್ಜು ಟಿಯರ್ ಗ್ಯಾಸ್, ನಿಷೇದಾಜ್ಞೆ ಉತ್ತರಿಸುತ್ತಿವೆ. ಎಲ್ಲಿದೆ ನ್ಯಾಯಾಂಗದ ಪರಿಪಾಲನೆ ? ಏನಿದು ಗುಂಡಾ ರಾಜ್ಯ ? ಎಂಬ ಗೊಣಗಾಟ ಸಾಮಾನ್ಯರೆಲ್ಲರ ಮನಸ್ಸಿನಲ್ಲಿ ಹುಟ್ಟುತ್ತಿವೆ. ಇದಕ್ಕೆ ಪೋಲಿಸರು ಉತ್ತರಿಸುವದಿಲ್ಲ. ಸರ್ಕಾರ ನಿರ್ಣಯ ತೆಗೆದುಕೊಳ್ಳುವದಿಲ್ಲ. ಹೀಗೆ ಸಾಗಿದೆ ಬೆಂಗಳೂರು ನಗರದ ದಿನಚರಿ.

ಕಳೆದವಾರ ಕಾಂಗೈ ರೌಡಿಗಳು ಚಾಕು, ಚೂರಿಯೊಡನೆ ಆಟವಾಡಿದರು. ಈ ವಾರ ಪೋಲಿಸರು ತಮ್ಮ ಲಾಠಿಗಳಿಂದ ರಿಕ್ಷಾ ಚಾಲಕರ ಬೆನ್ನಮೂಳೆ ಮುರಿಯಲು ಪ್ರಯತ್ನಿಸಿದರು.

ಬೆವರು ಸುರಿಸಿ ದುಡಿಯುವ ಆಟೋರಿಕ್ಷಾ ಚಾಲಕರಿಗೆ ಅಪರಾಧ ಮಾಡಲು ಅನುಮತಿ ಕೊಟ್ಟು ಅವರ ಎಂಜಲ ಕಾಸಿಗೆ ಕೈ ಒಡ್ಡುವ ಪೋಲಿಸರ ಕರ್ತವ್ಯನಿಷ್ಠೆ ಇಂದು ನಿನ್ನೆಯದಲ್ಲ. ಅದು ನಿರಂತರ. ಅವರ ಕರ್ತವ್ಯ ನಿಷ್ಠೆಗೆ ಯಾರಾದರೂ ಅಡ್ಡ ಬಂದರೆ ಅವರು ಉಳಿಯುವಂತಿಲ್ಲ. ಇದೇ ಪರಿಸ್ಥಿತಿ, ಇದೇ ಕಾರಣ, 10ರ ಮೇಯಂದು ನಡೆದ ರಿಕ್ಷಾ ಚಾಲಕರ ಪ್ರತಿಭಟನಾ ಪ್ರದರ್ಶನ.

ಕ್ರಾಂತಿ ಅರಸರು

ಎಲ್ಲ ರಂಗಗಳಿಂದಲೂ ವಂಚಿತರಾಗುತ್ತ ಇಲ್ಲವೇ ಪಲಾಯನ ಮಾಡುತ್ತ ಹೊರಟ ಮಾಜಿ ಕಾಂಗೈ ಹೋರಾಟಗಾರ ದೇವರಾಜ್ ಅರಸು ಅವರು ಈಗ ಬರೀ 'ಕರ್ನಾಟಕದ ಕ್ರಾಂತಿ' ರಂಗಕ್ಕೆ ಧುಮುಕಿದ್ದಾರೆ.

ನಂಬಿದವರೆಲ್ಲ ದೂರ ಹೋದರು, ನಂಬಿದ ಶಿಷ್ಯರು ಕೈಕೊಟ್ಟರು. ಅದರೂ, ಅರಸು ಛಲಬಿಡದ ತ್ರಿವಿಕ್ರಮನಂತೆ "ಕಾಂತಿ ರಂಗ"ವನ್ನು ಹೆಗಲೇರಿಸಿಕೊಂಡು ಸ್ಮಶಾನ–ಸರಕಾರದಂತ ತಮ್ಮ ಅನುಭವಗಳ ಕತೆ ಹೇಳುತ್ತ ಹೊರಟ ಇವರಿಗೆ ಈಗ ಕ್ರಾಂತಿರಂಗ ಭವಿಷ್ಯದ ಬಗ್ಗೆ ಉತ್ತರಿಸಬೇಕಾದೆ. ಇಲ್ಲದಿದ್ದರೆ ಹೊಸ ಪಕ್ಷದ ತಲೆ ಒಡೆದು ಸಾವಿರ ಹೋಳಾದಿತು !

ಡಕಾಯಿತರಾರು ?

ನಮ್ಮದು ಡಕಾಯಿತರ ದೇಶವೆ ? ಹೌದು. ಹೀಗೆಂದು ಎಸ್. ಬಂಗಾರಪ್ಪನವರು ಒಪ್ಪುತ್ತಾರೆ. ಆದರೆ ಡಕಾಯಿತರು ಯಾರು ? ಕಾರ್ಮಿಕರನ್ನು ಕೊಲ್ಲುವ, ಕೃಷಿಕರ ಕತ್ತು ಹಿಚುಕುವ ರಾಜಕಾರಣಿಗಳು ಈ ದೇಶದ ದೊಡ್ಡ ಢಕಾಯಿತರು ಎಂದು ಎಲ್ಲರೂ ಒಪ್ಪುವ ಮಾತು. ಆದರೆ ಈ ಮಾತು ಬಂಗಾರಪ್ಪ ಹೇಗೆ ಹೇಳುವರು ? ಅವರೂ ರಾಜಕಾರಣಿಗಳಲ್ಲವೆ ?

ಭಾರತದ ಭ್ರಷ್ಟ ರಾಜಕೀಯದ ತೆರೆಯ ಮೇಲೆ ಮಿನುಗುವ ರಾಜಕಾರಣಿಗಳು ಒಂದಲ್ಲ ಒಂದು ದೃಷ್ಟಿಯಿಂದ ಡಕಾಯಿತರೆಂದೆನಿಸಿಕೊಳ್ಳುತ್ತಲೇ ಬರುತ್ತಿದ್ದಾರೆ.

ಆದರೆ ಈಗ ನಾವು ಈ ರಾಜಕಾರಣಿ ಡಕಾಯಿತರ ನಡುವೆಯೆ ಉಸಿರು ಕಟ್ಟಿ ಸಾಯುವಾಗ ಯಾರನ್ನು ಡಕಾಯಿತರು ಅಲ್ಲವೆಂದು ಗುರುತಿಸುವುದು ?

— ನಾಗ ಕಲಾಲ್

ಕನ್ನಡ ಆಡಳಿತ ಭಾಷೆಯನ್ನಾಗಿ ಮಾಡಲು ಸಿ.ಪಿ.ಐ.(ಎಂ) ಸೆಕ್ರೆಟಾರಿಯೆಟ್ ಕರೆ

(1ನೇ ಪುಟ ದಿಂದ)

ಜನಭಾಷೆಯನ್ನಾಗಿ ಮಾಡುವುದು ಪ್ರಗತಿಯನ್ನು ಸಾಧಿಸಲು ಅವಶ್ಯವೆಂದೂ ಪಕ್ಷವು ನಂಬುತ್ತದೆ. ಆದರೆ ಹೀಗೆ ಮಾಡುವಾಗ ರಾಜ್ಯದಲ್ಲಿ ಅಲ್ಪಸಂಖ್ಯಾತ ಭಾಷೆಗಳಾಗಿರುವ ಇತರ ರಾಷ್ಟ್ರ ಭಾಷೆಗಳ ಮತ್ತು ಜನಾಂಗ ಭಾಷೆಗಳ ಹಿತಾಸಕ್ತಿಗಳನ್ನು ರಕ್ಷಿಸಬೇಕೆಂದೂ ಸಿ. ಪಿ. ಐ. (ಎಂ) ದೃಢವಾಗಿ ನಂಬುತ್ತದೆ. ಪ್ರತಿಯೊಂದು ಭಾಷಾವಾರು ರಾಜ್ಯವು ಒಂದು ಸ್ವತಂತ್ರ ಸಾರ್ವಭೌಮ ರಾಷ್ಟ್ರವಾಗಿರದೆ, ಭಾಷಾವಾರು ರಾಜ್ಯಗಳ ಒಕ್ಕೂಟದಿಂದ ರೂಪಿಸಲ್ಪಟ್ಟ ದೇಶದ ಒಂದು ಭಾಗವಾಗಿರುವುದರಿಂದ ಇದು ಬಹಳ ಮುಖ್ಯವಾಗಿದೆ. ಭಾಷೆಯಂತಹ ಪ್ರಶ್ನೆಗಳ ಬಗ್ಗೆ ದೇಶದಾದ್ಯಂತ ಒಂದೇ ಸಮನಾದ ಮತ್ತು ತತ್ವಬದ್ಧವಾದ ನಿಲುವು ಅವಶ್ಯ ಎಂಬುದನ್ನೂ ನೆನಪಿನಲ್ಲಿಡಬೇಕು.

ಸಂಸ್ಕೃತಕ್ಕೆ ಪ್ರಥಮ ಭಾಷೆಯ ಸ್ಥಾನವನ್ನು ಕೊಡುವ ಗುಂಡೂರಾವ್ ಸರಕಾರದ ಕ್ರಮವನ್ನು ಸಿ ಪಿ.ಐ.(ಎಂ) ವಿರೋಧಿಸಿದೆ. ಕನ್ನಡವನ್ನು ಆಡಳಿತದ ಎಲ್ಲಾ ಹಂತಗಳಲ್ಲೂ ಸರಕಾರಿ ಭಾಷೆಯನ್ನಾಗಿ ಮಾಡುವುದಕ್ಕೂ, ಮತ್ತು ಕನ್ನಡದಲ್ಲಿ ಎಲ್ಲರೂ ಪಾಂಡಿತ್ಯ ಪಡೆಯಬೇಕೆಂದು ಒತ್ತಾಯಿಸದೆ ರಾಜ್ಯದಲ್ಲಿ ಎಲ್ಲರೂ ವ್ಯಾವಹಾರಿಕವಾಗಿ ಅವಶ್ಯವಿರುವಷ್ಟು ಕನ್ನಡವನ್ನು ಕಲಿಯುವಂತೆ ಮಾಡಬೇಕೆಂದೂ ಪಕ್ಷವು ಒತ್ತಾಯಿಸುತ್ತಾ ಬಂದಿದೆ. ಅಲ್ಪಸಂಖ್ಯಾತ ಭಾಷೆಗಳ ಹಿತಾಸಕ್ತಿಗಳನ್ನೂ ಗಮನದಲ್ಲಿರಿಸಿ, ಸೂಕ್ತ ಮಾರ್ಪಾಡುಗಳೊಂದಿಗೆ ಗೋಕಾಕ್ ಸಮಿತಿ ವರದಿ ಜಾರಿಗೊಳಿಸಲೂ ಸಿ. ಐ. ಪಿ. (ಎಂ) ಒತ್ತಾಯಿಸುತ್ತಾ ಬಂದಿದೆ. ಆದುದರಿಂದಲೇ ತಾನು ಅನುಸರಿಸಿಕೊಂಡು ಬಂದಿರುವ ನಿಲುವಿಗೆ ಅನುಸಾರವಾಗಿಯೇ ಇರುವುದರಿಂದ ರಾಜ್ಯ ಸರಕಾರವು ಇತ್ತೀಚೆಗೆ ತೆಗೆದುಕೊಂಡಿರುವ ತೀರ್ಮಾನವು ತಾತ್ವಿಕವಾಗಿ ಸೂಕ್ತವಾಗಿದೆ ಎಂದು ಸಿ.ಪಿ.ಐ. (ಎಂ) ಅಭಿಪ್ರಾಯಪಟ್ಟಿದೆ. ಸಂಸ್ಕೃತಕ್ಕೆ ಪ್ರಥಮ ಭಾಷೆ ಸ್ಥಾನಕೊಡದೆ, ಅಲ್ಪ ಸಂಖ್ಯಾತ ಭಾಷೆಗಳ ಹಿತಾಸಕ್ತಿಗಳನ್ನು ರಕ್ಷಿಸಿಕೊಂಡು, ಕನ್ನಡದ ಸಾರ್ವಭೌಮತ್ವವು ಶೈಕ್ಷಣಿಕ ರಂಗದಲ್ಲಿ ಇರುವಂತೆ ಮಾಡುವ ಸೂತ್ರವು ಅಡಕವಾಗಿರುವುದರಿಂದಲೇ ಸಿ. ಪಿ. ಐ. (ಎಂ) ಅದನ್ನು ಸರಿ ಎಂದಿದೆ. ಅಂದರೆ ಅಂಕಗಳ ಬಗ್ಗೆ, ಅಂದರೆ 150,100, 100 ಎಂದು ಮಾಡಿರುವ ಸೂತ್ರದ ಬಗ್ಗೆ ವಿಮರ್ಶಿಸುವಾಗ ಇನ್ನೂ ಸರಳ ಮತ್ತು ಉತ್ತಮವಾದ ಸೂತ್ರವನ್ನು ಅನುಸರಿಸಬಹುದಿತ್ತು ಎಂದು ಸಿ.ಪಿ.ಐ. (ಎಂ) ಅಭಿಪ್ರಾಯಪಡುತ್ತದೆ. ತೀರ್ಮಾನಗಳನ್ನು ತೆಗೆದುಕೊಳ್ಳುವಾಗ ಶಿಕ್ಷಣ ಪಂಡಿತರ, ಭಾಷಾಪ್ರತಿನಿಧಿಗಳ ಮತ್ತು ಎಲ್ಲಾ ರಾಜಕೀಯ ಪಕ್ಷಗಳ ಪ್ರತಿನಿಧಿಗಳ ಸಲಹೆ ಪಡೆದಿದ್ದರೆ ಇನ್ನೂ ಉತ್ತಮ ಸೂತ್ರವನ್ನು ಅನುಸರಿಸಬಹುದಿತ್ತು. ಅಂಕಗಳ ಬಗ್ಗೆ ಸರಕಾರವು ಮತ್ತೊಮ್ಮೆ ವಿಮರ್ಶಿಸಬೇಕೆಂದು ಸಿ.ಪಿ.ಐ. (ಎಂ) ಸೂಚಿಸುತ್ತದೆ.

ಇಂಗ್ಲೀಷ್ ಭಾಷೆಯನ್ನು ದೂರ ಮಾಡಿ, ಕನ್ನಡ ಬಾಷೆಯನ್ನು ಈ ಕೂಡಲೇ ಆಡಳಿತದ ಎಲ್ಲಾ ಹಂತಗಳಲ್ಲೂ, ವಿಭಾಗಗಳಲ್ಲೂ ಆಡಳಿತ ಭಾಷೆಯನ್ನಾಗಿ ಮಾಡುವಂತೆ ಸಿ. ಪಿ. ಐ. (ಎಂ) ಸರಕಾರವನ್ನು ಒತ್ತಾಯಿಸುತ್ತದೆ. ಮತ್ತು ಈ ದಿಸೆಯಲ್ಲಿ ಸರಕಾರವು ಕ್ರಮವಹಿಸುವಂತೆ ಒತ್ತಾಯ ತರಲು ಎಲ್ಲಾ ಪ್ರಗತಿಪರ ಮತ್ತು ಪ್ರಜಾಪ್ರಭುತ್ವ ಶಕ್ತಿಗಳೂ ಜನತೆಯ ಚಳುವಳಿಗಳನ್ನು ಬೆಳೆಸಲು ಪಕ್ಷವು ಕರೆ ಈಯುತ್ತದೆ. ಗೋಕಾಕ್ ವರದಿಗೆ ಸಂಬಂಧಿಸಿ ನಡೆದಿರುವ ಚಳುವಳಿಯಲ್ಲಿ ಬಂಧಿತರಾದವರನ್ನೆಲ್ಲಾ ನಿಶ್ಯರ್ತವಾಗಿ ಬಿಡುಗಡೆ ಮಾಡಲು ಸಿ. ಪಿ. ಐ.(ಎಂ) ಒತ್ತಾಯಿಸುತ್ತದೆ.

ಕಾನೂನು ಮತ್ತು ವ್ಯವಸ್ಥೆ:

ದಿನೇ ದಿನೇ ರಾಜ್ಯದಲ್ಲಿ, ಅದರಲ್ಲೂ ಮುಖ್ಯವಾಗಿ ರಾಜಧಾನಿಯಾದ ಬೆಂಗಳೂರಿನಲ್ಲಿ ಹೆಚ್ಚುತ್ತಿರುವ ಕಳ್ಳಕಾಕತನ, ದರೋಡೆ ಮತ್ತು ಗೂಂಡಾಗಿರಿಗಳಿಂದಲಾಗಿ ಜನತೆಯ ಜೀವ ಮತ್ತು ಸ್ವತ್ತುಗಳಿಗೆ ಭದ್ರತೆ ಇಲ್ಲದಂತಾಗಿರುವುದನ್ನು ಸಿ.ಪಿ.ಐ. (ಎಂ) ಸಭೆಯು ಗಂಭೀರವಾಗಿ ಪರಿಗಣಿಸಿತು. ರಾತ್ರಿ ಬಸ್ಸುಗಳಲ್ಲಿ ಪ್ರಯಾಣಿಸುತ್ತಿದ್ದಾಗ ಕಳ್ಳಕಾಕರ ಧಾಳಿ, ಬೆಂಗಳೂರಿನಲ್ಲಂತೂ ದಿನೇ ದಿನೇ ಹೆಚ್ಚುತ್ತಿರುವ ದರೋಡೆಗಳು, ಇತ್ತೀಚೆಗೆ ನಗರದಲ್ಲಿ ನಡೆದಿರುವುದೂ ಸೇರಿ ಹೆಚ್ಚುತ್ತಿರುವ ಗೂಂಡಾಗಿರಿ, ರಾಜ್ಯದ ಬೇರೆ ಬೇರೆಡೆಗಳಲ್ಲಿ ಕಂಡು ಬರುತ್ತಿರುವ ಕೋಮು ಗಲಭೆಗಳು, ಇವೆಲ್ಲಾ ಜನತೆಯ ಮನಸ್ಸಿಗೆ ಭಯವನ್ನುಂಟು ಮಾಡಿವೆ. ಪೋಲೀಸರು ಮತ್ತು ಸರಕಾರವು ತಪ್ಪಿತಸ್ಥರನ್ನು ಹುಡುಕಿ ಹಿಡಿದು ಕ್ರಮವಹಿಸಿ ಮುಂದೆ ಈ ರೀತಿಯ ಘಟನೆಗಳು ಪುನರಾವರ್ತಿಸದಂತೆ ಮಾಡುವುದರಲ್ಲಿ ಸಂಪೂರ್ಣ ವಿಫಲವಾಗಿರುವುದು ಕಂಡು ಬಂದಿದೆ. ಆದರೆ ಆಶ್ಚರ್ಯದ ಸಂಗತಿಯೆಂದರೆ ರಾಜ್ಯದ ಮುಖ್ಯಮಂತ್ರಿ ಶ್ರೀಮಾನ್ ಆರ್. ಗುಂಡೂರಾವ್ ತಮ್ಮ ರಾಜ್ಯದಲ್ಲಿ ಇವೆಲ್ಲಾ ನಡೆಯುತ್ತಿರುವುದನ್ನೂ ತಮ್ಮ ಸರಕಾರ ಹತ್ತಾರು ಮಂದಿ ನಿರಪರಾಧಿಗಳನ್ನು ಗುಂಡಿಟ್ಟು ಕೊಂದಿರುವುದನ್ನೂ, ಸಹಸ್ರಾರು ಮಂದಿಯನ್ನು ಜೈಲಿಗೆ ತುಂಬಿರುವುದನ್ನೂ ಮರೆತು, ಚುನಾವಣಾ ಪ್ರಚಾರಕ್ಕೆಂದು ಕೇರಳಕ್ಕೆ ಹೋಗಿ ಅಲ್ಲಿ ಮಾರ್ಕ್ಸಿಸ್ಟ್ ಪಕ್ಷದ ನೇತೃತ್ವದ ಎಡ ಪ್ರಜಾಪ್ರಭುತ್ವರಂಗ ಸರಕಾರದ ಆಡಳಿತದಲ್ಲಿ ಕಾನೂನು ವ್ಯವಸ್ಥೆ ಇದ್ದಿಲ್ಲ ಎಂದು ಹೇಳುತ್ತಿರುವುದು. ಕೇಂದ್ರದಲ್ಲಿರುವ ತಮ್ಮ ಪಕ್ಷದ ಸರಕಾರ ಅಂತರಾಷ್ಟ್ರೀಯ ಹಣಕಾಸು ಸಂಸ್ಥೆಯ ಶರತ್ತುಗಳಿಗೆ ಒಪ್ಪಿ ಭಾರತದೇಶದ ಸ್ವಾತಂತ್ರ್ಯ ಮತ್ತು ಸಾರ್ವಭೌಮತ್ವವನ್ನೇ ಒತ್ತೆ ಇಟ್ಟಿದೆ. ಆದರೆ ಗುಂಡೂರಾಯರು ಹೇಳುತ್ತಿರುವುದು ಕಮ್ಯೂನಿಸ್ಟರು ದೇಶದ್ರೋಹಿಗಳು ಎಂದು; ಕಾಂಗ್ರೆ ಸರಕಾರವು ಸರ್ವಾಧಿಕಾರಿ ಕ್ರಮಗಳನ್ನು ಅನುಸರಿಸುತ್ತಿದೆ. ಆದರೆ ಗುಂಡೂರಾಯರು ಕಮ್ಯೂನಿಸ್ಟರು ಪ್ರಜಾಪ್ರಭುತ್ವ ವಿರೋಧಿಗಳೆಂದು ಘೋಷಿಸುತ್ತಿರುವುದು ವಿಚಿತ್ರ. ಆದರೆ ಕೇರಳದಲ್ಲಿ ಎಡ ಪ್ರಜಾಪ್ರಭುತ್ವರಂಗ ಸರಕಾರವು ಕಾಂಗ್ರೆ ಸರಕಾರದ ಪ್ರಜಾಪ್ರಭುತ್ವ ವಿರೋಧಿ ಕಾನೂನುಗಳನ್ನು ಜಾರಿಗೊಳಿಸಲು ಒಪ್ಪಿಲ್ಲ ಎಂಬುದು ಜನತೆಗೆ ತಿಳಿದಿದೆ.

ರಾಜ್ಯದ ಜನತೆಗೆ ಭದ್ರತೆ ಮತ್ತು ರಕ್ಷಣೆ ಕೊಡಲು ರಾಜ್ಯ ಸರಕಾರವು ವಿಫಲವಾದುದನ್ನು ಸಿ.ಪಿ.ಐ. (ಎಂ) ಉಗ್ರವಾಗಿ ಟೀಕಿಸುತ್ತದೆ. ಮತ್ತು ಜನತೆಯ ಜೀವ ಮತ್ತು ಸ್ವತ್ತುಗಳಿಗೆ ಭದ್ರತೆ ಮತ್ತು ರಕ್ಷಣೆ ಒದಗಿಸಲು ತಕ್ಷಣವೇ ಸೂಕ್ತ ಕ್ರಮವಹಿಸಲು ಒತ್ತಾಯಿಸುತ್ತದೆ.

ರೈತರ ಚಳುವಳಿ :

ರೈತರಿಗೆ ಕೊಟ್ಟಿದ್ದ ಆಶ್ವಾಸನೆಗಳನ್ನು ಈಡೇರಿಸದೆ ಇರುವುದಕ್ಕೂ, ಅವರಿಂದ ಕರಗಳ ಮತ್ತು ಸಾಲ ವಸೂಲು ಮಾಡುವ ನೆಪದಲ್ಲಿ ರೈತರಿಗೆ ಕಿರುಕುಳ ಕೊಡುವುದಕ್ಕೂ ರಾಜ್ಯ ಸರ್ಕಾರವನ್ನು ಸಿಪಿಐ (ಎಂ) ಖಂಡಿಸುತ್ತದೆ. ರೈತರ ಸಮಸ್ಯೆಗಳನ್ನು ಪರಿಹರಿಸುವ ಬದಲು, ತಮ್ಮ ಮೇಲಿನ ಅನ್ಯಾಯಗಳ ವಿರುದ್ಧ ಅವರು ನಡೆಸುತ್ತಿರುವ ನ್ಯಾಯಯುತ ಹೋರಾಟಗಳನ್ನು ದಮನ ಮಾಡಲು ಪ್ರಯತ್ನಿಸುವ ಸರಕಾರದ ನೀತಿಯ ಬಗ್ಗೆ ಸಿಪಿಐ (ಎಂ) ಆಶ್ಚರ್ಯಪಡುತ್ತದೆ. ರೈತ ಮುಖಂಡರ ಮೇಲೆ ಗಡೀಪಾರು ಆಜ್ಞೆಗಳನ್ನು ಮಾಡುವುದು, ಸಹಸ್ರಾರು ರೈತರುಗಳನ್ನು ಬಂಧಿಸಿ ಜೈಲಿನಲ್ಲಿಟ್ಟಿರುವುದನ್ನು ಸೆಕ್ರೆಟಾರಿಯೆಟ್ ಉಗ್ರವಾಗಿ ಖಂಡಿಸುತ್ತದೆ. ಮತ್ತು ಎಲ್ಲಾ ಬಂಧಿತರನ್ನು ಈ ಕೂಡಲೇ ನಿಶ್ಯರ್ತವಾಗಿ ಬಿಡುಗಡೆ ಮಾಡಲು ಒತ್ತಾಯಿಸುತ್ತದೆ. ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಬೆಂಬಲಿತ ಕರ್ನಾಟಕ ಪ್ರಾಂತ ರೈತ ಸಂಘವು ರಾಜ್ಯ ವ್ಯಾಪಿಯಾಗಿ ದೀರ್ಘ ಕಾಲೀಕವಾಗಿ ಹೋರಾಟ ನಡೆಸಲು ಈಗಾಗಲೇ ಯೋಜನೆಯನ್ನು ಹಾಕಿದೆ. ರೈತರ ಮತ್ತು ಗ್ರಾಮೀಣ ಬಡ ಜನತೆಯ ಸಮಸ್ಯೆಗಳ ಪರಿಹಾರಕ್ಕಾಗಿ ಈ ಹೋರಾಟ ನಡೆಯುವುದು. ಸರ್ಕಾರವು ದಮನಕಾರಿ ನೀತಿಯನ್ನು ಕೈಬಿಟ್ಟು, ರೈತರ ಸಮಸ್ಯೆಗಳನ್ನು ಈಡೇರಿಸಲು ಮುಂದಾಗದಿದ್ದಲ್ಲಿ ಎಲ್ಲ ಎಡ ಮತ್ತು ಪ್ರಜಾಪ್ರಭುತ್ವ ಶಕ್ತಿಗಳು ಒಂದಾಗಿ ರಾಜ್ಯವ್ಯಾಪಿ ಚಳುವಳಿ ನಡೆಸಬೇಕಾಗುವುದೆಂದೂ ಸಿ ಪಿ ಐ (ಎಂ) ಸರ್ಕಾರಕ್ಕೆ ಎಚ್ಚರ ನೀಡುತ್ತದೆ.

ಸಿಪಿಐ ಮತ್ತು ಸಿಪಿಐ (ಎಂ) ಜಂಟೀ ಸಮಾವೇಶ

ಸಿಪಿಐ ಮತ್ತು ಸಿಪಿಐ (ಎಂ) ನ ರಾಜ್ಯ ಘಟಕಗಳು ಜತೆಯಾಗಿ ರಾಜ್ಯ ಮಟ್ಟದ ಜಂಟೀ ಸಮಾವೇಶವನ್ನು ನಡೆಸಬೇಕೆಂದು ಮಾಡಲಾದ ಸೂಚನೆಯನ್ನು ಚರ್ಚಿಸಿದ ಸೆಕ್ರೆಟರಿಯೆಟ್, ಅಂತಹ ಸಮಾವೇಷಕ್ಕೆ ಸಧ್ಯದ ರಾಜಕೀಯ ಪರಿಸ್ಥಿತಿಯು ತುಂಬಾ ಪಕ್ವವಾಗಿದೆ ಎಂದು ಅಭಿಪ್ರಾಯಪಟ್ಟಿತು. ಜೂನ್ 11 ರಂದು ಬೆಂಗಳೂರಿನಲ್ಲಿ ನಡೆಸಲು ಯೋಚಿಸಿರುವ ಈ ಜಂಟೀ ಸಮಾವೇಶವು ಮುಂಬರುವ ದಿನಗಳಲ್ಲಿ ರಾಜ್ಯದಲ್ಲಿ ಜನತೆಯ ಸಮಸ್ಯೆಗಳ ಪರಿಹಾರಕ್ಕಾಗಿ ತೀವ್ರತರವಾದ ಚಳುವಳಿಗಳನ್ನು ನಡೆಸಲು ಕಾರ್ಯಕ್ರಮವನ್ನು ರೂಪಿಸಿಕೊಂಡು, ರಾಜ್ಯದಲ್ಲಿ ಎಲ್ಲಾ ಎಡ ಪ್ರಜಾಪ್ರಭುತ್ವ ಶಕ್ತಿಗಳನ್ನು ಒಗ್ಗೂಡಿಸಲು ಸಹಾಯಕವಾಗುವುದೆಂದು ಸಿಸಿಐ (ಎಂ) ಆಶಿಸುತ್ತದೆ.

ಮೇ 27 ಮತ್ತು 28 ರಂದು ಬೆಂಗಳೂರಿನಲ್ಲಿ ಸೇರಲಿರುವ ಪಕ್ಷದ ರಾಜ್ಯ ಸಮಿತಿ ಸಭೆಯು ಈ ಎಲ್ಲದರ ಬಗ್ಗೆ ವಿಮರ್ಶಿಸಿ, ಸೂಕ್ತ ನಿರ್ಣಯಗಳನ್ನು ಕೈಗೊಳ್ಳಲಿದೆ.

●

ಎಡ ಪ್ರಜಾಪ್ರಭುತ್ವ ರಂಗದ ಅಭ್ಯರ್ಥಿಗಳನ್ನು ಗೆಲ್ಲಿಸಿರಿ

(1ನೇ ಪುಟ ದಿಂದ)

ಗಳಿಗೆ ಸಂಪೂರ್ಣದ ಬೆಂಬಲವಿತ್ತು, ಪ್ರಚಂಡ ಬಹುಮತ ದೊಂದಿಗೆ ಅವರನ್ನು ಗೆಲ್ಲಿಸಬೇಕಾಗಿ ಸಿ. ಪಿ. ಐ. (ಎಂ) ಕರ್ನಾಟಕರಾಜ್ಯ ಸಮಿತಿ ವಿನಂತಿಸುತ್ತದೆ.

ಹೊಸದುರ್ಗ ಮತ್ತು ಬೀದರಗಳಲ್ಲಿ ಜನತಾಪಕ್ಷದ ಅಭ್ಯರ್ಥಿಗಳನ್ನು ಗೆಲ್ಲಿಸಿರಿ.

ಕರ್ನಾಟಕರಾಜ್ಯದಲ್ಲಿ ಮೇ 19 ರಂದು ಬೀದರ ಮತ್ತು ಹೊಸದುರ್ಗ ವಿಧಾನಸಭಾ ಕ್ಷೇತ್ರಗಳಲ್ಲಿ ನಡೆಯುವ ಉಪಚುನಾವಣೆಯಲ್ಲಿ ಸರ್ವಾಧಿಕಾರಿ ಕಾಂಗ್ರೆ ಅಭ್ಯರ್ಥಿಗಳನ್ನು ಸೋಲಿಸುವ ದೃಷ್ಟಿಯಿಂದ ಸಿ. ಪಿ. ಐ.(ಎಂ)ಜನತಾ ಪಕ್ಷದ ಅಭ್ಯರ್ಥಿಗಳಿಗೆ ತನ್ನೆಲ್ಲಾ ಬೆಂಬಲವನ್ನೂ ಸಾರಿದೆ. ಸಿ. ಪಿ. ಐ. ಮತ್ತು ದೇವರಾಜ ಅರಸು ಅವರ ಬೆಂಬಲವೂ ಜನತಾ ಪಕ್ಷದ ಅಭ್ಯರ್ಥಿಗಳಿಗೆ ಇದೆ. ಕರ್ನಾಟಕ ರಾಜ್ಯದಲ್ಲಿ ಜನ ವಿರೋಧಿ ಧೋರಣೆಗಳನ್ನೂ, ದಮನಕಾರಿ ನೀತಿಗಳನ್ನೂ ಅನುಸರಿಸುತ್ತಿರುವ ಗುಂಡೂರಾಯರ ಕಾಂಗ್ರೆ ಸರಕಾರದ ಆಡಳಿತದಿಂದದಾಗಿ ಜನತೆಯಲ್ಲಿ ಅತೃಪ್ತಿಹೆಚ್ಚುತ್ತಿರುವ ಇಂದಿನ ಸಂದರ್ಭದಲ್ಲಿ ಈ ಉಪಚುನಾವಣೆಗೆ ಬಹಳ ಮಹತ್ವಇದೆ. ಇದನ್ನು ಅರಿತುಕೊಂಡು, ಜನತಾಪಕ್ಷದ ಅಭ್ಯರ್ಥಿಗಳಿಗೇ ಮತವಿತ್ತು, ಅವರನ್ನು ಪ್ರಚಂಡ ಬಹುಮತಗಳೊಂದಿಗೆ ಗೆಲ್ಲಿಸಲು, ಶ್ರಮಿಸಲು ಸಿ. ಪಿ.ಐ.(ಎಂ) ತನ್ನ ಎಲ್ಲಾ ಸದಸ್ಯರುಗಳಿಗೆ, ಹಿತೈಷಿಗಳಿಗೂ, ಜನತೆಗೂ ಕರೆ ನೀಡಿದೆ.

●

ಬೀಡಿ ಕಾರ್ಮಿಕ ಚಳುವಳಿ

ದ. ಕ. ಜಿಲ್ಲೆಯ ಪದವು ಪ್ರದೇಶ ಬೀಡಿ ಕೆಲಸಗಾರರ (ಸಿಐಟಿಯು ನೇತೃತ್ವದ) ಸಂಘಕ್ಕೆ ಸೇರಿದ ಪಡುಬೊಂಡತಿಲ ಪ್ರದೇಶದ ಬೀಡಿ ಕಾರ್ಮಿಕರು, ಈ ಪ್ರದೇಶದ ಕೆಲವು ಬೀಡಿ ಕಂಟ್ರ್ಯಾಕ್ಟದಾರರು ಕನಿಷ್ಠ ಕೂಲಿ (7ರೂ 40 ಪೈಸೆ) ಕೊಡದೆ ಕೇವಲ 6ರೂ 80 ಪೈ. ಮಾತ್ರ ಕೊಡುತ್ತಿದ್ದುದನ್ನು ಪ್ರತಿಭಟಿಸಿ ಹೋರಾಟಕ್ಕಿಳಿದಿದ್ದರು.

ಕೊನೆಗೆ ಹೋರಾಟಕ್ಕೆ ಮಣಿದ ಕಾಂಟ್ರ್ಯಾಕ್ಟದಾರರು ಕನಿಷ್ಠ ಕೂಲಿ ಕೊಡಲು ಒಪ್ಪಿದ್ದಾರೆ. ಈ ಗೆಲುವಿನಿಂದ ಈ ಪ್ರದೇಶದ ಬೀಡಿ ಕಾರ್ಮಿಕರಿಗೆ ಹೊಸ ಸ್ಫೂರ್ತಿಬಂದಿದೆ.

30-4-82 ರಂದು ನಡೆದ ಬೀಡಿ ಕಾರ್ಮಿಕರ ಸಭೆಯನ್ನುದ್ದೇಶಿಸಿ ಕಾಂ। ಕೆ. ಆರ್. ಶ್ರೀಯಾನ್ ಮತ್ತು ಕೆ. ಬಾಬು ದೇವಾಡಿಗ ಅವರುಗಳು ಮಾತನಾಡಿ ಬೀಡಿ ಕಾರ್ಮಿಕರನ್ನು ಹೋರಾಟಕ್ಕೆ ಅಣಿಗೊಳಿಸಿದ್ದರು.

●

ಬೀಡಿ ಫೆಡರೇಷನ್ನಿನ ಮೆ 24ರ ಕಾರ್ಯಕ್ರಮ ಮುಂದೂಡಿಕೆ

ಕರ್ನಾಟಕ ರಾಜ್ಯ ಬೀಡಿ ಕಾರ್ಮಿಕರ ಫೆಡರೇಷನ್ನಿನ ಕಾರ್ಯಕಾರಿ ಸಮಿತಿಯ ಸಭೆಯು 13-5-82ರಂದು ಕುಣಿಗಲ್ ನಲ್ಲಿ ಸೇರಿತ್ತು. ಕಾಂ। ಸೂರ್ಯನಾರಾಯಣರಾವ್ ಅಧ್ಯಕ್ಷತೆ ವಹಿಸಿದ್ದರು. 24-5-82 ರಂದು ನಡೆಯಬೇಕಿದ್ದ ಪಿಕೆಟಿಂಗ್, ವಗೈರೆ ಕಾರ್ಯಕ್ರಮವನ್ನು ಸಾಕಷ್ಟು ಸಿದ್ಧತೆಗಳು ನಡೆದಿಲ್ಲವಾದ್ಧರಿಂದ 15-6-82ಕ್ಕೆ ಮುಂದೂಡಿದೆ.

●

Printed & Published by P. Ramachandra Rao by him on behalf of the Communist Party of India (Marxist) Karnataka State Committee L-56 K. V. Temple Street Sultanpet, Bangalore-560 053. Editorial and managerial office :L-56, K. V. Temple Street ,Sultanpet, Bangalore-560 053. Phone-24154. Printed at Ravee Traders, No. 8/1, J. M. Lane, Balepet Cross, Bangalore-560 053. EDITOR : M. K. BHAT,